ಜ್ಯೋತಿಕಾರ್ಯದ ವಾರ್ತಾಪತ್ರ



ಮಹರ್ಷಿ ಅಮರ (1919-1982)

**ಋಷಿಗಳು ಹೇಳಿಕೊಟ್ಟಂತೆ ನಾವು ಧ್ಯಾನವನ್ನು ಕಲಿಸುತ್ತೇವೆ.**

### ಬೆಳಕು

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದರು.

### ಸಪ್ತಋಷಿ ಧ್ಯಾನಯೋಗ

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ-ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು

★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
★ ಪ್ರೀತಿ ನಮ್ಮ ಸ್ವಭಾವ.
★ ಮೌನ ನಮ್ಮ ಭಾಷೆ.
★ ಧ್ಯಾನ ನಮ್ಮ ಮಾರ್ಗ.
★ ಈ ಪ್ರಪಂಚ ನಮ್ಮ ಆಶ್ರಮ.
★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.
★ ದೇವರು ನಮ್ಮ ಗುರು ; ಋಷಿಗಳು ನಮ್ಮ ಮಾರ್ಗದರ್ಶಿಗಳು

# ತಪೋವಾಣಿ

ಸಂಪುಟ 17 ಸಂಚಿಕೆ 07 ಜುಲೈ 2020 ರೂ.25

## ಅನಿಸಿಕೆಗಳು

**ಗುರೂಜಿ ಕೃಷ್ಣಾನಂದ**

**ಅನು: ಚಂಪಾ**

(ಹಿಂದಿನ ವಾರ್ತಾಪತ್ರಗಳಿಂದ ಆಯ್ದ ಭಾಗಗಳು – ನವೆಂಬರ್ 2001ರ ಸಂಚಿಕೆ)

ದಿವ್ಯ ಪ್ರೇಮ ಎಲ್ಲರೊಂದಿಗೆ ಎಲ್ಲವನ್ನೂ ಹೊಂದಾಣಿಕೆ ಮಾಡಿಕೊಳ್ಳುತ್ತದೆ; ಅಪರಿಪೂರ್ಣತೆಗಳು ಹಾಗೂ ಕುಂದುಕೊರತೆಗಳಿದ್ದರೂ ಹೊಂದಾಣಿಕೆ ಮಾಡಿಕೊಳ್ಳುತ್ತದೆ. ಇದೊಂದು ಅಪರಿಪೂರ್ಣ ಲೋಕ.

ಇದು ಧರ್ಮ ಅಧರ್ಮಗಳ ಲೋಕವೂ ಹೌದು. ಇಲ್ಲಿ ಸದಾ ಧರ್ಮ ಅಧರ್ಮಗಳ ನಡುವೆ ಯುದ್ಧ ನಡೆದೇ ಇರುತ್ತದೆ; ಒಳಗೂ ಹೊರಗೂ. ಇದು ಯಾವಾಗಲೂ ಒಂದು ಧರ್ಮ ಕ್ಷೇತ್ರವೇ; ಎರಡು ಧರ್ಮಗಳ, ಎರಡು ಸ್ವಭಾವಗಳ ರಣರಂಗ. ಧರ್ಮಕ್ಕೆ ಜಯವಾದಾಗ ಅಧರ್ಮ ಹಿಂದಕ್ಕೆ ಸರಿದು ಹೊಂಚುಹಾಕುತ್ತಿರುತ್ತದೆ. ಧರ್ಮವು ರಂಗಭೂಮಿಯಿಂದ ಹಿಂದಕ್ಕೆ ಸರಿದಾಗ, ಅಧರ್ಮಕ್ಕೂ ಕಾಲ ಬರುತ್ತದೆ. ಅದು ರಂಗಭೂಮಿಗೆ ಹಿಂದಿರುಗುವ ಕಾಲ ಬಂದಾಗ, ಭಗವಂತ ಸಹಾಯಕ್ಕಾಗಿ ಮನುಷ್ಯಲೋಕಕ್ಕೆ ಇಳಿದು ಬರುತ್ತಾನೆ. ಇದು ಯುಗ ಯುಗಗಳ ಕಥೆ. ಹಾಗೂ ಈಗ ಧರ್ಮದ ವಿಜಯಕ್ಕೆ ಕಾಲ ಕೂಡಿ ಬಂದಿದೆ.

ನಾವು ದಿವ್ಯಪ್ರೇಮವನ್ನು ಅಭಿವ್ಯಕ್ತಿಸುವಾಗ ಅಧರ್ಮಕ್ಕೆ ಎಡೆ ಕೊಡಬಾರದು. ಧರ್ಮದ ಪಕ್ಷದಲ್ಲಿರುವವರು ಅವರಿಗೆ ಸಾಧ್ಯವಾದ ರೀತಿಯಲ್ಲಿ ಅಧರ್ಮದ ವಿರುದ್ಧ ಹೋರಾಡಬೇಕು; ಬಹಿರಂಗವಾಗಿ ಅಥವಾ ಗುಪ್ತವಾಗಿ. ಇದು ಆಧ್ಯಾತ್ಮಿಕ. ಆಧ್ಯಾತ್ಮಿಕವೆಂದರೆ ಕೇವಲ ಒಳ್ಳೆಯವರಾಗಿರುವುದಲ್ಲ, ಕೆಟ್ಟದರೊಂದಿಗೂ ಹೋರಾಡಬೇಕಾಗುತ್ತದೆ.

ಆಧ್ಯಾತ್ಮಿಕತೆಯು ಎಲ್ಲ ಮಟ್ಟಗಳಲ್ಲೂ ಸ್ವಾತಂತ್ರ್ಯವನ್ನು ಹಾಗೂ ಎಲ್ಲರಿಗೂ ಆನಂದವನ್ನು ಅನುಮೋದಿಸುತ್ತದೆ. ಹಾಗೂ ಹಿಂಸಾಚಾರ ಸಲ್ಲದು. ಈ ಸತ್ಯಗಳನ್ನು ಉಲ್ಲಂಘಿಸಿದಾಗ ಪ್ರಳಯ ಉಂಟಾಗುತ್ತದೆ.

ಪ್ರಳಯ ಎಂದರೆ ಬದಲಾವಣೆ; ಬದಲಾವಣೆ ಒಳ್ಳೆಯದಕ್ಕಾಗಿ. ವರ್ಷಗಳ ಹಿಂದೆಯೇ ಪ್ರಳಯ ಆರಂಭವಾಯಿತು. ಅದೀಗ ಸೂಕ್ಷ್ಮ ಮಟ್ಟದಲ್ಲಿ ತೀವ್ರವಾಗುತ್ತಿದೆ. ಸೂಕ್ಷ್ಮ ಮಟ್ಟದಲ್ಲಿ ಸಂಭವಿಸಿದುದು ಸ್ವಲ್ಪ ಕಾಲಾನಂತರ ಭೌತಿಕಕ್ಕೆ ಇಳಿದುಬರುತ್ತದೆ.

ಸೂಕ್ಷ್ಮ ಮಟ್ಟದಲ್ಲಿ ಸಂಭವಿಸಿದುದೆಲ್ಲವೂ ಸಂಪೂರ್ಣವಾಗಿ ಭೌತಿಕ ಮಟ್ಟಕ್ಕೆ ಇಳಿದು ಬರಬೇಕೆಂದೇನಿಲ್ಲ. ಧ್ಯಾನದ ತಂತ್ರಗಳಿಂದ ಮೊದಲುಗೊಂಡ ಪ್ರಕ್ರಿಯೆಗಳಿಂದಲೂ ಅದರಲ್ಲಿನ ಸ್ವಲ್ಪ ಭಾಗ ಬದಲಾಗಬಹುದು.

ವೈಯಕ್ತಿಕ ಧ್ಯಾನಗಳೂ ಅದರಲ್ಲಿ ಸೇರುತ್ತವೆ; ನೆರವಿಗೆ ಬರುತ್ತವೆ. ಆದರೆ ಶೀಘ್ರ ಪರಿಣಾಮಗಳಿಗೆ ಸಮೂಹ ಧ್ಯಾನಗಳು ಅವಶ್ಯಕವಾಗುತ್ತವೆ. ಅವು ಸ್ಪಂದನಗಳ ಮಟ್ಟವನ್ನು ಬದಲಿಸಿ ಪವಾಡಸದೃಶ ಪರಿಣಾಮಗಳನ್ನು ಉಂಟುಮಾಡುತ್ತವೆ.

ಧ್ಯಾನಕ್ಕೆ ಇದು ಸಕಾಲ.

ಸ್ವಾತಂತ್ರ್ಯ ಒಳ್ಳೆಯದು. ಇತರರ ಸ್ವಾತಂತ್ರ್ಯದಲ್ಲಿ ಹಸ್ತಕ್ಷೇಪ ಮಾಡದಿರುವುದು ಇನ್ನೂ ಒಳ್ಳೆಯದು. ಸ್ವಾತಂತ್ರ್ಯದ ಅಂತಿಮ ನಡೆ ಶರಣಾಗತಿ. ಸಂಪೂರ್ಣ ಶರಣಾಗತಿ, ಅಂತಿಮ ಸ್ವಾತಂತ್ರ್ಯಕ್ಕೆ ಹಾದಿಯಾಗುತ್ತದೆ. ಅದೇ ಮೋಕ್ಷ.

ಗೊಂದಲವಾಗುತ್ತಿದೆಯೇ?

ನಾವು ನಮ್ಮ ಅಂತರ್ ಗ್ರಹಣ ಶಕ್ತಿಯಿಂದ ಸತ್ಯಗಳನ್ನು ಹೆಚ್ಚಾಗಿ ಗ್ರಹಿಸಿದರೆ, ಗೊಂದಲವಿರುವುದಿಲ್ಲ. ಬೆಳಕಿದ್ದಲ್ಲಿ ಕತ್ತಲಿರುವುದಿಲ್ಲ.

ಮಾನಸ ಫೌಂಡೇಶನ್ (ರಿ)
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560077. ಭಾರತ.
✆ 99000 75280 (ಬೆಳಗ್ಗೆ 10ರಿಂದ ಸಂಜೆ 5)
ಇ-ಮೇಲ್: info@lightagemasters.com ವೆಬ್‌ಸೈಟ್: www.lightagemasters.com

## ಧ್ಯಾನದ ತರಗತಿಗಳು

### ತಪೋನಗರದಲ್ಲಿ

**ಭಾನುವಾರ**

ಪ್ರಾಥಮಿಕ ತರಗತಿ – ಬೆಳಿಗ್ಗೆ 10 ರಿಂದ 11

ರೆಗ್ಯುಲರ್ ತರಗತಿ – ಬೆಳಿಗ್ಗೆ 11 ರಿಂದ ಮಧ್ಯಾಹ್ನ 1

### ಬೆಂಗಳೂರು ನಗರದಲ್ಲಿ

**ಭಾನುವಾರ** (ಬೆಳಿಗ್ಗೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಸೋಮವಾರ** (ಸಂಜೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಮಂಗಳವಾರ** (ಸಂಜೆ 7 ರಿಂದ 8 ಘಂ.)
ಶ್ರೀ ಅರಬಿಂದೊ ಕಾಂಪ್ಲೆಕ್ಸ್, 1ನೇ ಫೇಸ್,
ಜೆ.ಪಿ. ನಗರ

**ಬುಧವಾರ** (ಸಂಜೆ 7 ರಿಂದ 8 ಘಂ.)
ಆರ್ಯ ಸಮಾಜ, ಸಿ.ಎಂ.ಹೆಚ್. ರೋಡ್,
ಇಂದಿರಾನಗರ
ಹಿಮಾಂಶು, 4ನೆಯ ಮೇನ್, ಮಲ್ಲೇಶ್ವರಂ
ಮಾರುತಿ ಮಂದಿರ, ವಿಜಯನಗರ

**ಗುರುವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ
ಬನಶಂಕರಿ 2ನೆಯ ಸ್ಟೇಜ್

**ಶನಿವಾರ** (ಬೆಳಿಗ್ಗೆ 7 ರಿಂದ 8 ಘಂ.)
ಇಂಡಿಯನ್ ಹೆರಿಟೇಜ್ ಅಕಾಡೆಮಿ
6ನೆಯ ಬ್ಲಾಕ್, ಕೋರಮಂಗಲ
(ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ,
ಬನಶಂಕರಿ 2ನೇ ಹಂತ

### ಆನೇಕಲ್‌ನಲ್ಲಿ

**ಸೋಮವಾರ** (ಸಾಯಂಕಾಲ 6 ರಿಂದ 7 ಘಂ.)
**ಮಂಗಳವಾರ** (ಬೆಳಿಗ್ಗೆ 6 ರಿಂದ 7 ಘಂ.)
**ಸಪ್ತರ್ಷಿ ಧ್ಯಾನ ಕೇಂದ್ರ, ರಾಜರಾಜೇಶ್ವರಿ ಬಡಾವಣೆ**

ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.

**ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ) ಪ್ರಕಾಶ್‌ಮಾರ್ಗ್ (ಮರಾಠಿ) ವಾರ್ತಾಪತ್ರದ ವಾರ್ಷಿಕ ಚಂದಾ ರೂ. 300/– ಡಿಡಿಯನ್ನು**
**'Manasa Light Age Foundation'**
**ಹೆಸರಿನಲ್ಲಿ ಕಳುಹಿಸಬೇಕು.**
**ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.**

### ಮಾಸ ಪತ್ರಿಕೆ

ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾ ದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.



ಗುರೂಜಿಯವರ ಸಮಾಧಿ ಮಂಟಪದ ನವೀಕರಣ ಕಾರ್ಯವು ಪ್ರಗತಿಯಲ್ಲಿದೆ

### ಸುದ್ಧಿ–ಸೂಚನೆಗಳು

- ಕೊರೋನ ಪಿಡುಗಿನ ಕಾರಣದಿಂದಾಗಿ, ತಪೋನಗರದಲ್ಲಿನ ಧ್ಯಾನದ ಸ್ಥಳಗಳನ್ನು ಸಾರ್ವಜನಿಕರಿಗೆ ಮುಚ್ಚಲಾಗಿರುತ್ತದೆ ಆದರೆ ಭಾನುವಾರದ ತರಗತಿಗಳು ವೆಬ್‌ಕಾಸ್ಟ್ ಮೂಲಕ ಮುಂದುವರಿಯುತ್ತವೆ.
- ಬೆಂಗಳೂರಿನ ಇತರೆ ಕೇಂದ್ರಗಳಲ್ಲಿ ಧ್ಯಾನದ ತರಗತಿಗಳನ್ನು ಮುಂದೆ ತಿಳಿಸುವವರೆಗೂ ರದ್ದುಗೊಳಿಸಲಾಗಿದೆ. ಈ ಕೇಂದ್ರಗಳ ವಿದ್ಯಾರ್ಥಿಗಳು ಅವರ ವಾರದ ತರಗತಿಯ ಸಮಯದಲ್ಲಿ ಭಾನುವಾರದ ವೆಬ್‌ಕಾಸ್ಟ್ ಅಥವ ಭಾನುವಾರದ ತರಗತಿಯ ಮುದ್ರಿತ ವಿಡಿಯೋವನ್ನು ನೋಡಬಹುದು.
- ನಮ್ಮ ರೆಗ್ಯುಲರ್ ಲೈಟ್ ಚಾನಲಿಂಗ್ ಕೇಂದ್ರಗಳಲ್ಲಿ ಲೈಟ್ ಚಾನಲಿಂಗ್ ಸೆಷನ್‌ಗಳನ್ನು ರದ್ದುಗೊಳಿಸಲಾಗಿದೆ. ಲೈಟ್ ಚಾನಲ್‌ಗಳು ಋಷಿಗಳನ್ನು ಪ್ರಾರ್ಥಿಸಿ ತಮ್ಮ ಮನೆಗಳಿಂದಲೇ ಬೆಳಕನ್ನು ಚಾನಲ್ ಮಾಡಬಹುದು.
- ನಮ್ಮ ವಾರ್ತಾಪತ್ರವನ್ನು ಮತ್ತು ಪುಸ್ತಕಗಳನ್ನು ನಿಮ್ಮ ಸ್ನೇಹಿತರಿಗೆ ಉಡುಗೊರೆಯಾಗಿ ಕೊಡುವ ಮೂಲಕ ನಮಗೆ ದಯವಿಟ್ಟು ಸಹಾಯ ಮಾಡಿ.

### ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 05 | ಭಾನು | ಗುರು ಪೂರ್ಣಿಮಾ<br>ಚಂದ್ರ ಗ್ರಹಣ:<br>ಬೆಳಿಗ್ಗೆ 8.37 ರಿಂದ 11.22 |
| 13 | ಸೋಮ | ಕೃಷ್ಣ ಅಷ್ಟಮಿ |
| 16 | ಗುರು | ದಕ್ಷಿಣಾಯಣ ಪ್ರಾರಂಭ |
| 19 | ಭಾನು | ಮಾಸ ಶಿವರಾತ್ರಿ |
| 20 | ಸೋಮ | ಅಮಾವಾಸ್ಯೆ |
| 27 | ಸೋಮ | ಶುಕ್ಲ ಅಷ್ಟಮಿ |
| 29 | ಬುಧ | ಶುಕ್ಲ ದಶಮಿ |
| 31 | ಶುಕ್ರ | ಮಹಾಲಕ್ಷ್ಮಿ ಪೂಜೆ |

### ಈ ತಿಂಗಳು ತಪೋನಗರದಲ್ಲಿ

ಸದ್ಯದಲ್ಲಿ, ಎಲ್ಲ ಕಾರ್ಯಕ್ರಮಗಳೂ ವೆಬ್‌ಕಾಸ್ಟ್ ಮೂಲಕ ಮಾತ್ರವೇ ನಡೆಯುತ್ತವೆ. ಸದ್ಯದಲ್ಲಿ, ತಪೋನಗರದಲ್ಲಿ ಭೌತಿಕವಾಗಿ ಸೇರುವ ಕಾರ್ಯಕ್ರಮಗಳಿರುವುದಿಲ್ಲ.

| | |
|---|---|
| ಭಾನುವಾರಗಳು: | ಉಪನ್ಯಾಸಗಳು :<br>ಬೆಳಿಗ್ಗೆ 11 ರಿಂದ 12<br>ಲೈಟ್ ಚಾನಲಿಂಗ್:<br>ಮಧ್ಯಾಹ್ನ 12 ರಿಂದ 1 |
| 05–7–2020 | ಗುರು ಪೂರ್ಣಿಮಾ ವಿಶೇಷ ಧ್ಯಾನ: ಗ್ರಹಣ ಧ್ಯಾನದ ನಂತರ ಮಧ್ಯಾಹ್ನ 1ರ ವರೆಗೆ. |
| 12–7–2020 | ಶಂಬಲ ಗ್ರೂಪ್ ಮಧ್ಯಾಹ್ನ 2 ಕ್ಕೆ ವೆಬ್‌ಕಾಸ್ಟ್ ಮೂಲಕ ಸಂಧಿಸುತ್ತದೆ |
| 19–7–2020 | ರಾ ತಂಡ ಮಧ್ಯಾಹ್ನ 2 ಕ್ಕೆ ವೆಬ್‌ಕಾಸ್ಟ್ ಮೂಲಕ ಸಂಧಿಸುತ್ತದೆ |

ಆಷಾಢ ಮಾಸದ ಅವಧಿಯಲ್ಲಿ ಅದ್ಭುತವಾದ ಮತ್ತು ಮಹಾನ್ ಚೈತನ್ಯಗಳನ್ನು ನಾವು ನೇರವಾಗಿ ಪರಬ್ರಹ್ಮ ಲೋಕದಿಂದ ಪಡೆಯುತ್ತೇವೆ. ನಾವು ಈ ತಿಂಗಳು ಪೂರ್ತಿ ಹೆಚ್ಚು ಧ್ಯಾನ ಮಾಡಿ ಈ ಚೈತನ್ಯಗಳನ್ನು ಪಡೆಯಬಹುದು. 05–7–2020ರ ಗುರು ಪೂರ್ಣಿಮೆಯ ದಿನದಂದು ಅವು ಅತಿ ಹೆಚ್ಚು ಇರುತ್ತವೆ. ಆ ದಿನದಂದು ನಮಗೆ ಸಾಧ್ಯವಾದಷ್ಟೂ ಹೆಚ್ಚು ಧ್ಯಾನ ಮಾಡಬಹುದು ಮತ್ತು ರಾತ್ರಿ ಮಲಗುವುದಕ್ಕೆ ಮುಂಚೆ, ಮೇಲಿನಿಂದ ಬೆಳಕು ನಿಮ್ಮನ್ನು ಪ್ರವೇಶಿಸಿ ಇಡೀ ಶಾರೀರಿಕ ವ್ಯವಸ್ಥೆಯನ್ನು ಸಂಪೂರ್ಣವಾಗಿ ತುಂಬುತ್ತದೆಂದು ಕಲ್ಪಿಸಿಕೊಳ್ಳಿ. ಈ ರೀತಿ 7 ನಿಮಿಷಗಳು ಅಭ್ಯಾಸಮಾಡಿ. ಇಡೀ ರಾತ್ರಿ ನಾವು ಚೈತನ್ಯಗಳನ್ನು ಪಡೆಯುತ್ತಿರುತ್ತೇವೆ.

ಜುಲೈ 5ರಂದು, ಬೆಳಿಗ್ಗೆ 08.37 ರಿಂದ ಬೆಳಿಗ್ಗೆ 11:22 ರವರೆಗೆ ಚಂದ್ರ ಗ್ರಹಣವಿದೆ. ದಯವಿಟ್ಟು ಗ್ರಹಣದ ಪೂರ್ತಿ ಸಮಯದಲ್ಲಿ ಇಡೀ ಪ್ರಪಂಚಕ್ಕೆ ಬೆಳಕನ್ನು ಚಾನಲ್ ಮಾಡಿ.

## ಲೈಟ್ ಚಾನಲಿಂಗ್ ಅನುಭವಗಳು ಮತ್ತು ಶಾಲೆಗಳಿಂದ ಬಂದ ಪ್ರತಿಕ್ರಿಯೆಗಳು

ಸಂ: ವೈಶಾಲಿ ಜೋಶಿ; ಅನು: ಸುಜಾತ ವಿ

ನಾನು ಲೈಟ್ ಚಾನಲಿಂಗ್ ಮಾಡುತ್ತಿದ್ದಂತೆ, ಮೊದಲಿಗೆ ಅಪಾರವಾದ ಚೈತನ್ಯಗಳು ಹರಿಯುತ್ತಿದ್ದ ಅರಿವಾಯಿತು ಮತ್ತು ನಂತರ ಸುಮಾರು 5–10 ನಿಮಿಷದವರೆಗೆ ನಾನು ರೆಕ್ಕೆಗರಿಯಷ್ಟು ಹಗುರವಾಗಿದ್ದ ಅನುಭವವಾಯಿತು. ನನ್ನ ಶರೀರದ ಅರಿವು ಮತ್ತು ಸುತ್ತಲಿನ ಅರಿವು ನನಗಿತ್ತು ಆದರೆ ನನಗೆ ತೂಕವೇ ಇಲ್ಲದಂತೆ ಭಾಸವಾಯಿತು. ನಾನು ಚಿಕ್ಕ ಬಿಂದುವೇನೋ ಎಂದೆನಿಸುತ್ತಿತ್ತು. ನಾನು ಕಣ್ಣುಗಳನ್ನು ತೆರೆದಾಗ ಕೂಡ ಅದೇ ತೂಕರಹಿತತೆಯ ಭಾಸವಾಗುತ್ತಿತ್ತು.

ನಾನು ಚಾನಲ್ ಮಾಡುತ್ತಿದ್ದಾಗ, ಇದ್ದಕ್ಕಿದ್ದಂತೆ "ಬೆಳಕು ಸಂತೋಷದಿಂದಿದೆ" ಎಂಬ ಒಂದು ಆಲೋಚನೆ ಬಂದಿತು. ಮತ್ತು ಆಶ್ಚರ್ಯಕರವಾಗಿ, ಈಗಿನ ನೋವಿನ ಮತ್ತು ನರಳುವ ಸಮಯಗಳಲ್ಲಿ ಕೂಡ, ಸುತ್ತಮುತ್ತಲೂ ಬಹಳಷ್ಟು ಸಂತೋಷ ಮತ್ತು ಸಕಾರಾತ್ಮಕತೆ ಇದೆ ಎಂದು ನನಗೆ ಅನಿಸುತ್ತಿತ್ತು. ಆ ದಿನ ಶಕ್ತಿಯುತವಾದ ಅನೇಕ ಚೈತನ್ಯಗಳನ್ನು ಅನುಭವಿಸಿದೆ. 25 ನಿಮಿಷಗಳು ಹೇಗೆ ಕಳೆದುಹೋಯಿತೆಂದು ನನಗೆ ಅರಿವಾಗಲಿಲ್ಲ. ಈ ತರಹದ ತೀವ್ರವಾದ ಅನುಭವವನ್ನು ಮುಂಚೆ ನಾನು ಅನುಭವಿಸಿರಲಿಲ್ಲ.

**–ಪುಷ್ಕರ್ ಪಟ್ಕಿ, ಬೆಳಕಿನ ಚಾನಲ್**

ನನ್ನ ಮುಂದೆ ವ್ಯಕ್ತಿಯೊಬ್ಬರು ಕುಳಿತುಕೊಂಡು ನನ್ನ ಜೊತೆಯಲ್ಲಿಯೇ ಲೈಟ್ ಚಾನಲಿಂಗ್ ಮಾಡುತ್ತಿದ್ದುದನ್ನು ನೋಡಿದೆ.

**–ಪೃಥ್ವಿರಾಜ್, ವಿದ್ಯಾರ್ಥಿ, ಭಾರತಿ ವಿದ್ಯಾಪೀಠ ಇಂಗ್ಲೀಷ್ ಮಿಡಿಯಮ್ ಸ್ಕೂಲ್, ಪುಣೆ**

ನಾನು ಲೈಟ್ ಚಾನಲಿಂಗ್ ಮಾಡುವ ಆ ಕೆಲವು ನಿಮಿಷಗಳು ನನಗೆ ಬಹಳ ಮುಖ್ಯವೆಂದು ಅನಿಸುತ್ತದೆ. ಪರೀಕ್ಷೆ, ಟೆಸ್ಟ್‌ಗಳು ಮತ್ತು ಇತ್ಯಾದಿಗಳಿಂದ ನಾನು ಒತ್ತಡಕ್ಕೊಳಗಾಗುತ್ತೇನೆ. ಲೈಟ್ ಚಾನಲಿಂಗ್ ನನ್ನನ್ನು ಒತ್ತಡದಿಂದ ಮುಕ್ತಗೊಳಿಸಿದೆ ಮತ್ತು ನನ್ನ ಮನಸ್ಸು ಉಲ್ಲಾಸಗೊಳ್ಳುತ್ತದೆ.

**–ಭಾನುಪ್ರಿಯ, 9ನೇ ತರಗತಿ, ಬಸವೇಶ್ವರ ಹೈ ಸ್ಕೂಲ್, ಬ್ಯಾಟರಾಯನಪುರ, ಬೆಂಗಳೂರು**

ವಿಶ್ವ ಚಾನಲ್ ದಿನದಂದು, ಶಿವಗಂಗಾ ಜಿಲ್ಲೆಯ ಒಂದು ಶಾಲೆಯಲ್ಲಿ ಬೆಳಕಿನ ಚಾನಲಿಂಗ್ ಸೆಷನ್ ನಂತರ, ನಸುಗೆಂಪು ಬಣ್ಣದ ಬೆಳಕಿನ ಚೆಂಡುಗಳನ್ನು ಅನೇಕ ವಿದ್ಯಾರ್ಥಿಗಳು ನೋಡಿದರೆಂದು ಹೇಳಿದರು. ಅದು ತುಂಬಾ ಮನಮುಟ್ಟುವಂತಿತ್ತು.

**–ಸ್ವಾಮಿನಾಥನ್, ಸ್ವಯಂಸೇವಕರು**

ಪುಣೆಯಲ್ಲಿರುವ ಹ್ಯೆರ್ ಹೈ ಸ್ಕೂಲ್‌ನಲ್ಲಿ, ಲೈಟ್ ಚಾನಲಿಂಗ್ ಸೆಷನ್ ಶುರುವಾದ ನಂತರ, ತಕ್ಷಣದಲ್ಲಿಯೇ ನಿಶ್ಚಲತೆ ನೆಲೆಸಿತು, ಮತ್ತು 7–8 ನಿಮಿಷಗಳ ನಂತರ ಎಲ್ಲರೂ ಶಾಂತತೆಯಿಂದ ಮತ್ತು ಆನಂದದಿಂದ ನಿಧಾನವಾಗಿ ಕಣ್ಣುಗಳನ್ನು ತೆರೆದರು. ಅಸೆಂಬ್ಲಿಯನ್ನು ನಡೆಸುತ್ತಿದ್ದ ಪ್ರಮುಖ ಶಿಕ್ಷಕಿಯೊಬ್ಬರು ಬೆಳಕಿನ ಸಂಪರ್ಕದಲ್ಲಿಯೇ ಮುಂದುವರಿಯುತ್ತಿದ್ದರು ಮತ್ತು ಅವರು ಕಣ್ಣುಗಳನ್ನು ತೆರೆದಾಗ ಮೈಕ್‌ನ ಎದುರು ದಿಗ್ಭ್ರಾಂತರಾಗಿ ನಿಂತಿದ್ದರು.

ಪುಣೆಯಲ್ಲಿರುವ ಶಿವ್‌ರಾಯ್ ಪ್ರತಿಷ್ಠಾನದಲ್ಲಿ, ಪರಿಚಯಿಸುವುದನ್ನು ಪ್ರಾರಂಭಿಸಿದಾಗ ಕೆಲ ಹುಡುಗರು ತುಂಟಾಟದ ಮಾತುಗಳನ್ನಾಡಲು ಮತ್ತು ಕಿಲಕಿಲನೆ ನಗಲು ಪ್ರಾರಂಭಿಸಿದರು. ಅವರನ್ನು ಉದ್ದೇಶಿಸಿ ನವುರಾಗಿ ಹೇಳಿದಾಗ ಸುಮ್ಮನಾದರು ಮತ್ತು ಆಲಿಸಿದರು. ಸೂಜಿ ಬಿದ್ದರೂ ಕೇಳುವಷ್ಟು ನಿಶ್ಶಬ್ದವಾಗಿತ್ತು. ಸೆಷನ್ ಮುಗಿದ ನಂತರ, ಎಲ್ಲೆಡೆ ಶಾಂತವಾಗಿತ್ತು ಮತ್ತು ತುಂಟ ಮಕ್ಕಳು ಒಳಗೊಂಡು ಎಲ್ಲ ವಿದ್ಯಾರ್ಥಿಗಳೂ ಇದು ತಮಗೆ ಇಷ್ಟವಾಗಿದೆ ಎಂದು ಹೇಳಿದರು ಮತ್ತು ಖಂಡಿತವಾಗಿ ಲೈಟ್ ಚಾನಲ್ ಮಾಡುವುದಾಗಿ ಮತ್ತು ಒಬ್ಬರಿಗೊಬ್ಬರು ಇದರ ಬಗ್ಗೆ ಜ್ಞಾಪಿಸುವುದಾಗಿಯೂ ಹೇಳಿದರು. ವಿದ್ಯಾರ್ಥಿಯರಲ್ಲಾದ ಪರಿವರ್ತನೆ, ಶಾಂತತೆಯು ಮನಮುಟ್ಟುವಂತಿತ್ತು. ಕೆಲವರು ಕಣ್ಣೀರು ಸುರಿಸುತ್ತಿದ್ದರು. ಇಂತಹ ಕೆಲಸದಲ್ಲಿ ನಾವು ಭಾಗಿಯಾಗುವುದು ಒಂದು ಅನುಗ್ರಹವೇ ಸರಿ.

**–ಗೀತಾ ಜೋಷಿ, ಸ್ವಯಂಸೇವಕಿ**

ಒಂದು ಗುಂಪಿನ ಮುಂದೆ ನಿಲ್ಲಲು ಹಾಗೂ ಮಾತನಾಡಲು ನನಗೆ ಭಯವಾಗುತ್ತಿತ್ತು. ಲೈಟ್ ಚಾನಲ್ ಮಾಡಿದ ನಂತರ ನನಗೆ ಆ ಭಯದಿಂದ ಹೊರ ಬರಲು ಸಾಧ್ಯವಾಯಿತು. ನನ್ನ ನಕಾರಾತ್ಮಕತೆಯು ಕೂಡ ಕಡಿಮೆಯಾಯಿತು.

**–ವಿದ್ಯಾರ್ಥಿ, 7ನೇ ತರಗತಿ, ಗೋಕುಲ್ ವಿದ್ಯಾ ಕೇಂದ್ರ, ಬೆಂಗಳೂರು**

ಬೆಳಗ್ಗೆ ನನ್ನಲ್ಲಿ ಕೆಟ್ಟ ಆಲೋಚನೆಗಳಿದ್ದವು. ಲೈಟ್ ಚಾನಲಿಂಗ್ ಮಾಡಿದ ನಂತರ ನಾನು ಉತ್ತಮಗೊಂಡೆ. ಮುಂಚೆ, ನನಗೆ ಕನ್ನಡ ಓದುವುದಕ್ಕೆ ಮತ್ತು ಬರೆಯುವುದಕ್ಕೆ ಬರುತ್ತಿರಲಿಲ್ಲ. ಆದರೆ ನಿಯಮಿತವಾಗಿ ಲೈಟ್ ಚಾನಲಿಂಗ್ ಅಭ್ಯಾಸ ಮಾಡಿದ ನಂತರ ನಾನು ನಿಧಾನವಾಗಿ ಅದರಲ್ಲಿ ಸುಧಾರಣೆಯನ್ನು ಕಂಡೆ.

**–ರೋನಕ್, 10ನೇ ತರಗತಿ, ಸೇಂಟ್ ರೋಹಿತ್ ಹೈ ಸ್ಕೂಲ್, ಬೆಂಗಳೂರು**

ಲೈಟ್ ಚಾನಲಿಂಗ್ ತಂತ್ರವನ್ನು ಅಭ್ಯಾಸ ಮಾಡಿದ ಮೇಲೆ ನಾನು ಬಹಳ ಸಮಾಧಾನದಿಂದಿರುತ್ತೇನೆ ಮತ್ತು ನನ್ನ ಎಲ್ಲ ಒತ್ತಡಗಳು ಮಾಯವಾಗುತ್ತವೆ.

**–ಶ್ರೀ ದಹಿಪಾಲೆ, ಶಿಕ್ಷಕರು, ಜ್ಯೋತಿರಾವ್ ಫೂಲೆ ಬಾಯ್ಸ್ ಹೈ ಸ್ಕೂಲ್, ಪುಣೆ.**

### ಲೈಟ್ ಚಾನಲ್ಸ್ ವಿಶ್ವ ಸಂಚಲನ

ಇದು, ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವುದಕ್ಕಾಗಿ ಆತ್ಮಪ್ರಜ್ಞೆಯಲ್ಲಿ ನಡೆಯುವ ಒಂದು ಸಂಚಲನ. ಭಾಷಣಗಳು, ಚಾವುಟಗಳಿಲ್ಲದ, ಬೆಳಕನ್ನು ಚಾನಲ್ ಮಾಡಿದರಷ್ಟೇ ಸಾಕಾಗುವ ಒಂದು ಸಂಚಲನ. ಪದಗಳು ಮಾಡಲಾಗದ ಎಲ್ಲವನ್ನೂ ಬೆಳಕೇ ಮಾಡುತ್ತದೆ.

ನಾವು ಚಾನಲ್ ಮಾಡಿ ಬೆಳಕನ್ನು ಹರಡಿದಾಗ, ಅದು ಬೇರೆಯವರ ಹೃದಯಗಳನ್ನು ಮತ್ತು ಮನೆಗಳನ್ನು ಪ್ರವೇಶಿಸುತ್ತದೆ ಮತ್ತು ಆಲೋಚನೆಗಳು ಮತ್ತು ಭಾವನೆಗಳಲ್ಲಿರುವ ಕತ್ತಲನ್ನು ಪರಿವರ್ತಿಸುತ್ತದೆ. ವ್ಯಕ್ತಿಗಳೊಂದಿಗೆ ಪ್ರಪಂಚವೂ ಪರಿವರ್ತನೆಗೊಳ್ಳುತ್ತದೆ.

ಇದು ಭೌತಿಕ ಬೆಳಕಲ್ಲ, ಆದರೆ ಇದು, ಯಾವುದರಿಂದ ಇಡೀ ಸೃಷ್ಟಿ ಬಂದಿದೆಯೋ ಆ ಅತಿ ಸೂಕ್ಷ್ಮ ಬೆಳಕು. ಈ ಬೆಳಕಿನಲ್ಲಿ ಎಲ್ಲವೂ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ, ಆದರೆ ಎಲ್ಲಾ ಕಡೆ ಇದೆ.

ನಾವು ಪ್ರತಿದಿನ ಎದ್ದಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ಚಾನಲ್ ಮಾಡಿ ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.

ಚಾನಲ್ ಮಾಡಿ ಬೆಳಕನ್ನು ಹರಡುವುದಕ್ಕಾಗಿ, ನಿಮ್ಮ ಮೇಲೆ ಬೆಳಕಿನ ಸಾಗರವೊಂದನ್ನು ಕಲ್ಪಿಸಿಕೊಳ್ಳಿ, ನಂತರ ಈ ಸಾಗರದಿಂದ ಬೆಳಕಿನ ದಪ್ಪ ಕಿರಣವೊಂದು ಕೆಳಬಂದಂತೆ ಕಲ್ಪಿಸಿಕೊಳ್ಳಿ, ಈ ಬೆಳಕು ನಿಮ್ಮನ್ನು ಪ್ರವೇಶಿಸಿ ನಿಮ್ಮ ದೇಹವನ್ನು ಸಂಪೂರ್ಣವಾಗಿ ತುಂಬುತ್ತಿದೆಯೆಂದು ಕಲ್ಪಿಸಿಕೊಳ್ಳಿ, ಒಂದು ನಿಮಿಷ ಈ ಬೆಳಕನ್ನು ಅನುಭವಿಸಿ. ನಂತರ ಈ ಬೆಳಕು ನಿಮ್ಮ ದೇಹದಿಂದ ಹೊರಬಂದು ನಿಧಾನವಾಗಿ ಸುತ್ತಲೂ ಹರಡುತ್ತಾ, ನಿಮ್ಮ ಮನೆ, ಪ್ರದೇಶ, ದೇಶ ಮತ್ತು ಇಡೀ ಪ್ರಪಂಚವನ್ನು ತುಂಬುತ್ತಿದೆ ಎಂದು ಕಲ್ಪಿಸಿಕೊಳ್ಳಿ.

ಈ ಸಂಚಲನವನ್ನು 18–5–2008 ರಂದು, ಗುರೂಜಿ ಕೃಷ್ಣಾನಂದರವರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.

ಈ ಸಂದೇಶವನ್ನು ಎಲ್ಲರಿಗೂ ಹರಡಿ.

www.lightchannels.comಗೆ ಭೇಟಿ ನೀಡಿ.

### ಶಂಬಲದ ನಿಯಮಗಳು

**ಈ ಏಳು ನಿಯಮಗಳನ್ನು ಶಂಬಲದಲ್ಲಿ ವಾಸಿಸುತ್ತಿರುವ ಜನರು ಅಭ್ಯಾಸ ಮಾಡುತ್ತಾರೆ. ಅವರು ಶಾಂತಿ–ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವನದಲ್ಲಿಯೇ ಬದುಕುತ್ತಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ನಂತರ ಅವುಗಳನ್ನು ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ನಕಾರಾತ್ಮಕತೆಗಳನ್ನು ಗೆಲ್ಲಲು ದೇಹ, ಮನಸ್ಸು ಮತ್ತು ಬುದ್ಧಿಗಳನ್ನು ಸಿದ್ಧಗೊಳಿಸುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡುವುದು.

# ಗುರೂಜಿಯವರ ನುಡಿಗಳು

**ಗುರೂಜಿಯವರ ಭಾಷಣಗಳಿಂದ ಆಯ್ದ ಭಾಗಗಳು**

**ಸಂ: ಶೋಭಾ ಕೆ. ರಾವ್; ಅನು: ಸುಜಾತ ವಿ**

ಮೇ 2006 (ಮುಂದುವರೆದುದು)

ಒಂದು ಮುಖ್ಯವಾದ ಅಂಶವೆಂದರೆ, ಸಾಧನೆಯನ್ನು ತೆಗೆದುಕೊಳ್ಳಲು ನಿರ್ಣಯಿಸುವುದು ಅಥವ ಸಾಧನೆಯನ್ನು ಪ್ರಾರಂಭಿಸುವುದು ಕೂಡ ಬರೀ ಮೊದಲನೆಯ ಹೆಜ್ಜೆ ಅಷ್ಟೆ, ಮನೆಯ ಮುಖ್ಯ ಬಾಗಿಲನ್ನು ತೆಗೆಯುವ ಹಾಗೆ. ನಾವು ಇದರಲ್ಲಿ ಮುಂದುವರಿಯಬೇಕು ಮತ್ತು ಇದಕ್ಕೆ ಕೊನೆಯೇ ಇಲ್ಲ. ನಾವು ನಿಜವಾಗಿಯೂ ದೇವರಲ್ಲಿ ಮತ್ತೆ ಲೀನವಾದರೆ, ಆಗ ಮಾತ್ರ ಅಂತ್ಯವಾಗುತ್ತದೆ.

ಬುದ್ಧ ದೇವರ ಪ್ರಭಾವಳಿ (aura) ಮೈಲಿಗಟ್ಟಲೆ ವಿಸ್ತಾರಗೊಂಡಿತ್ತೆಂದು ಹೇಳಲಾಗಿದೆ. ಅದು ಅದ್ಭುತ! ನಾವು ನಮ್ಮ ಗುರುಗಳ ಪ್ರಭಾವಳಿಯನ್ನು ನೋಡಲೇ ಇಲ್ಲ. ಬಹುಶ: ಅದು ಇಡೀ ಬೆಂಗಳೂರನ್ನು ವ್ಯಾಪಿಸಿರುತ್ತಿತ್ತು. ಅವರು ಅಂತಹ ಮಹಾನ್ ವ್ಯಕ್ತಿ. ನಾವು ಅಂತಹ ವಿಷಯಗಳನ್ನು ಗಮನಿಸಲು ಎಂದಿಗೂ ಪ್ರಯತ್ನಿಸಲಿಲ್ಲ. ಅದರ ಬದಲಿಗೆ ನಾವು ಅವರಿಂದ ಬಂದ ಮಾತುಗಳಲ್ಲಿ ಮುಳುಗಿ ಹೋಗಿದ್ದೆವು, ಅವರು ಹೇಳಿದ್ದನ್ನೆಲ್ಲಾ ಸೆರೆಹಿಡಿಯಲು ಕಷ್ಟಪಡುತ್ತಿದ್ದೆವು. ಆ ಸಮಯದಲ್ಲಿ ನಮಗೆ ಜಾಸ್ತಿ ಏನೂ ಅರ್ಥವಾಗಿರಲಿಲ್ಲ. ಅನುಗತವಾಗಿ, ಪ್ರಭಾವಳಿಯ ಬಗ್ಗೆ ಬಹಳಷ್ಟು ಪುಸ್ತಕಗಳಿವೆ; ಬಹಳಷ್ಟು ಮಾಹಿತಿಗಳಿವೆ. ನಾನು ಒಂದು ಅಥವ ಎರಡು ಅಂಶವನ್ನು ಹೇಳುತ್ತೇನೆ.

ಪ್ರಭಾವಳಿಯು (aura) ಒಂದು ರೀತಿಯ ಹೊರಹೊಮ್ಮುವಿಕೆ, ಅದು ನಮ್ಮ ಮನಸ್ಸಿನಿಂದ ಅಥವಾ ಮನೋಮಯ ಕೋಶದಿಂದ ಬರುವ ಒಂದು ರೀತಿಯ ಹೊಳಪು. ನಮಗೆ ಹೇಗೆ ಪ್ರಭಾವಳಿ ಇದೆಯೋ, ಹಾಗೆಯೇ ಗಿಡಗಳಿಗೆ ಕೂಡ ಇದೆ. ನೀವು ಮರಗಳನ್ನು ನೋಡಬಹುದು. ಮರಗಳನ್ನು ನೋಡಲು ಪ್ರಯತ್ನಿಸಿ. ನಾನು ನೋಡಲು ಪ್ರಯತ್ನಿಸಿದೆ... ಮರಗಳಿಗೆ ಅವುಗಳದ್ದೇ ಆದ ಪ್ರಭಾವಳಿ ಇರುತ್ತದೆ. ಜಡ ವಸ್ತುಗಳಿಗೆ ಪ್ರಭಾವಳಿ ಇದೆ. ಈ ಮೈಕ್‌ಗೆ ಪ್ರಭಾವಳಿ ಇದೆ, ನೀವು ನೋಡಬಹುದು. ನೀವು ಈಗ ನೋಡುವುದಕ್ಕೆ ಆಗುವುದಿಲ್ಲ ಏಕೆಂದರೆ ಬಿಳಿಯ ಹಿನ್ನೆಲೆ ಇರುವುದರಿಂದ. ನೀವು ನೋಡುವ ಪ್ರಭಾವಳಿಯು ಏನನ್ನು ಸೂಚಿಸುತ್ತದೆ? ಎಲ್ಲವನ್ನೂ ಸೂಚಿಸುತ್ತದೆ, ಎಲ್ಲ ವಸ್ತುಗಳಿಗೆ, ಜೀವಿಗಳಿಗೆ ಅಥವ ನಿರ್ಜೀವಿಗಳಿಗೆ ಅದರದೇ ಆದ ಚೈತನ್ಯ ವಲಯವಿರುತ್ತದೆ ಮತ್ತು ಈ ಹೊರಹೊಮ್ಮುವಿಕೆಯು ಆ ಚೈತನ್ಯ ವಲಯದಿಂದ ಬರುತ್ತದೆ.

ಪ್ರಭಾವಳಿಯ ವಿಷಯವನ್ನು ಮೀರಿ ಮುಂದೆ ಹೋದರೆ – ಎಲ್ಲದರಲ್ಲು ಚೈತನ್ಯದ ಕ್ಷೇತ್ರವಿರುತ್ತದೆ ಮತ್ತು ಯಾವಾಗಲೂ ಅದರಲ್ಲಿ ಒಂದು ಮಧ್ಯ ಭಾಗವಿರುತ್ತದೆ, ಅದು ಕೇಂದ್ರ ಭಾಗ (core). ಅಲ್ಲಿ ಶುದ್ಧ ಚೈತನ್ಯ ಇದೆ, ಬುದ್ಧಿಶಕ್ತಿ ಇದೆ. ಕೇಂದ್ರ ಭಾಗದ ಜೊತೆ ಮಾತನಾಡಬಹುದು. ನಾವು ಕೇಂದ್ರ ಭಾಗದ ಜೊತೆ ಸಂಪರ್ಕವನ್ನು ಸ್ಥಾಪಿಸಿಕೊಳ್ಳಬಹುದು. ಕೇಂದ್ರ ಭಾಗ ಒಂದು ಆತ್ಮವಿದ್ದಂತೆ. ಕಲ್ಲು ಬಂಡೆಯನ್ನು ಕೂಡ ಇನ್ವೊಕ್(invoke) ಮಾಡಬಹುದೆಂದು ನಾವು ಸಾಮಾನ್ಯವಾಗಿ ಹೇಳುತ್ತೇವೆ. ಕೇಂದ್ರ ಭಾಗವು ಶುದ್ಧ ಚೈತನ್ಯ; ಅದು ಸ್ವತಃ ದೇವರು. ನೀವು ಬಂಡೆಯ ಜೊತೆ ಮಾತನಾಡಬಹುದು. ನೀವು ಕೇಂದ್ರ ಭಾಗವನ್ನು ಇನ್ವೊಕ್ ಮಾಡಿದಾಗ ಯಾವಾಗಲೂ ಚೈತನ್ಯಗಳನ್ನು ಅರ್ಪಿಸಬೇಕು. ನೀವು ಚೈತನ್ಯಗಳನ್ನು ಸಂಗ್ರಹಿಸಿ ಗೌರವದ ಸಂಕೇತವಾಗಿ ಅದನ್ನು ಬಂಡೆಗಲ್ಲಿಗೆ ಅರ್ಪಿಸಬೇಕು ಮತ್ತು ಸಹಜವಾಗಿ ಪ್ರೀತಿಯನ್ನೂ ಅರ್ಪಿಸಬೇಕು. ಇನ್ವೊಕ್ ಮಾಡುವುದೆಂದರೆ ಅದೇ. ಇನ್ವೊಕ್ ಅಂದರೆ ಮತ್ತೇನು? ಅದು ಬಾಗಿಲನ್ನು ತಟ್ಟಿದ ಹಾಗೆ. ಮತ್ತು ನೀವು ಚೈತನ್ಯಗಳನ್ನು ಅರ್ಪಿಸಿದಾಗ ಮತ್ತು ಮಾತನಾಡಲು ಪ್ರಯತ್ನಿಸಿದಾಗ, ಯಾವುದೇ ವಸ್ತು ಮರು ಮಾತನಾಡುತ್ತದೆ. ನಿಮಗೆ ಅದರ ಧ್ವನಿ ಕೇಳಿಸದೆ ಇರಬಹುದು ಆದರೆ ನೀವು ಸಂಪರ್ಕವನ್ನು ಪಡೆದಿರುತ್ತೀರಿ. ಅದು ಬಂಡೆಗಲ್ಲಿನಿಂದ ಬಂದಿದೆ ಎಂದು ನಿಮಗೆ ಗೊತ್ತಾಗುತ್ತದೆ.

ಆ ಸಮಯದಲ್ಲಿನ ವಾರ್ತಾಪತ್ರ 'ತಪಸ್'ನಲ್ಲಿ, ನಾನು ಕಾರ್ ಜೊತೆ ಮಾತನಾಡಿದ್ದ ಎಂದು ಬರೆದಿದ್ದನ್ನು ನಿಮಗೆ ನೆನಪುಮಾಡಲು ಬಯಸುತ್ತೇನೆ. ನಾನು ಇದನ್ನು ಉಲ್ಲೇಖಿಸಿದಾಗ, ಇದೇ ರೀತಿಯ ಅನುಭವಗಳು ತಮಗೂ ಆಗಿದ್ದವು ಎಂದು ಬಹಳ ಜನರು ನನಗೆ ಬರೆದರು, ಆದರೆ ಅವರು ವಸ್ತುವಿನ ಜೊತೆ ಆ ಸಮಯದಲ್ಲಿ ನಿಜವಾಗಿಯೂ ಮಾತನಾಡುತ್ತಿದ್ದರು ಎಂದು ಅವರಿಗೆ ಸ್ಪಷ್ಟವಾಗಿ ಗೊತ್ತಿರಲಿಲ್ಲ. ಒಬ್ಬರು ನನಗೆ ಬರೆದರು. ಅದು ತುಂಬಾ, ತುಂಬಾ ಆಸಕ್ತಿಕರವಾಗಿತ್ತು. ಅವರು ಪೈಲಟ್ ಆಗಿದ್ದರು, ಮತ್ತು ಇಂಜಿನ್ ಕೆಟ್ಟು ಹೋಗುತ್ತದೆ. ಆಗ ಅವರು ವಿಮಾನವನ್ನು ಪ್ರಾರ್ಥಿಸಿದರೆಂದು ಅವರು ಹೇಳಿದರು. ಅವರು ಹೇಳಿದರು, "ನನ್ನ ಕೈ ಬಿಡಬೇಡ. ಯಾವ ಹಾನಿಯೂ ಆಗದಿರಲಿ." ಎರಡು ನಿಮಿಷದ ನಂತರ, ಇದ್ದಕ್ಕಿದ್ದಂತೆ ಅದು ಹೇಗೊ ಸರಿಯಾಯಿತೆಂದು ಅವರು ಹೇಳಿದರು. ಮತ್ತು ಏನೂ ಕೆಟ್ಟದ್ದು ಆಗುವುದಿಲ್ಲವೆಂಬ ಒಂದು ರೀತಿಯ ಭರವಸೆ ಸಿಕ್ಕಿದ್ದನ್ನೂ ಅವರು ನೆನೆಪಿಸಿಕೊಂಡರು. ಇದರಿಂದಾಗಿಯೇ, ದೇವರು ಎಲ್ಲ ಕಡೆ ಇರುವನೆಂದು ನಾವು ಹೇಳುವುದು. ದೇವರು ಎಲ್ಲೆಡೆ ಇದ್ದಾನೆ. ನೀವು ಅವನೊಂದಿಗೆ ಮಾತನಾಡಬಹುದು.

25 ವರ್ಷಗಳ ಹಿಂದೆ, ಮೇ 18 ರಂದು, ನಾನು ಮನೋವತಿಗೆ ಹೋದೆ. ಋಷಿಗಳು ಒಂದು ಕೇಂದ್ರವನ್ನು ಸ್ಥಾಪಿಸಿದರು – ಸಪ್ತ ಋಷಿಗಳ ಮೊಟ್ಟ ಮೊದಲ ಕೇಂದ್ರ. ಅವರು ಕೇಂದ್ರವನ್ನು ಸ್ಥಾಪಿಸಿ ಅದನ್ನು ತೆರೆದುದು ಮಾತ್ರವಲ್ಲದೇ ನಮಗೆ ಕೆಲಸ ಕೂಡ ಕೊಟ್ಟರು. ಗುರಿಗಳನ್ನು ಗೊತ್ತುಮಾಡಿದರು. ಆ ಸಮಯದಲ್ಲಿ ಇದು ನಮಗೆ ಸ್ಪಷ್ಟವಾಗಿ ಗೊತ್ತಿರಲಿಲ್ಲ. ಈಗ, ನಾನು ಹಿಂದೆ ತಿರುಗಿ ನೋಡಿದಾಗ, ನನಗೆ ಅರಿವಾಗಿದೆ, ಹೌದು, ಅವರು ಗುರಿಗಳನ್ನು ನಿರ್ಧರಿಸಿದ್ದರು. ಮೊದಲನೆಯದಾಗಿ ಧ್ಯಾನ ತರಬೇತು ಕೇಂದ್ರವನ್ನು ಸ್ಥಾಪಿಸುವುದು. ನಂತರದ್ದು, ಕಾಸ್ಮಿಕ್ ಟವರ್ ನಿರ್ಮಿಸುವುದು. ಈ 25 ವರ್ಷಗಳಲ್ಲಿ ನಾವಿದನ್ನು ಸಾಧಿಸಿದ್ದೇವೆಂದು ನನಗೆ ಅನಿಸುತ್ತಿದೆ. ಋಷಿಗಳು ನಿರ್ಧರಿಸಿದ್ದ ಗುರಿಗಳನ್ನು ನಾವು ಪೂರೈಸಿದ್ದೇವೆಂದು ನನಗೆ ಅನಿಸುತ್ತಿದೆ. ಮತ್ತೊಮ್ಮೆ, 25 ವರ್ಷಗಳ ನಂತರ, ಅದೇ ದಿನದಂದು – 18ನೇ ಮೇ – ನಾವು ಈ ಅಧ್ಯಯನ ಕೇಂದ್ರವನ್ನು ಸ್ಥಾಪಿಸಿದೆವು. ನಾನು ಮೊದಲು ಅದನ್ನು ಸಂಶೋಧನ ಕೇಂದ್ರ ಎಂದು ಕರೆದಿದ್ದೆ. ಈಗ ಅದನ್ನು ಅಧ್ಯಯನ ಕೇಂದ್ರವೆಂದು ಕರೆಯುತ್ತಿದ್ದೇವೆ. ಅದು ಸಂಶೋಧನ ಕೇಂದ್ರವೂ ಅಲ್ಲ ಅಧ್ಯಯನ ಕೇಂದ್ರವೂ ಅಲ್ಲ. ಅದು ಅದಕ್ಕಿಂತ ಹೆಚ್ಚಿನದು. ಇಲ್ಲಿ, ಬಹು ದೊಡ್ಡ ಕೆಲಸಗಳನ್ನು ಕೈಗೆತ್ತುಕೊಳ್ಳಲಾಗುತ್ತದೆ ಎಂದು ನನಗೆ ತಿಳಿದಿದೆ. ಈ ಸಮಯದಲ್ಲಿ ಈ ಕೇಂದ್ರ ಚಿಕ್ಕದಾಗಿರಬಹುದು ಆದರೆ ಇದರಿಂದ ಇಡೀ ಮಾನವ ಕುಲ ಲಾಭ ಪಡೆಯುತ್ತದೆ. ಇಲ್ಲಿ ಯಾವ ಸಾಂಪ್ರದಾಯಿಕವಾದ ಪದ್ಧತಿಗಳನ್ನು ನಾವು ಅನುಸರಿಸಲು ಸಾಧ್ಯವಿಲ್ಲ. ನಾವು ಹೊಸ ಮಾರ್ಗಗಳನ್ನು, ಹೊಸ ವಿಧಾನಗಳನ್ನು ರೂಪಿಸಿಕೊಳ್ಳಬೇಕು. ಈ ಕೇಂದ್ರದಲ್ಲಿ, ನಾವು ಮೇಲಿನಿಂದ ಜ್ಞಾನವನ್ನು ತಂದು ಅದನ್ನು ಆಲೋಚನೆಗಳಾಗಿ ಮತ್ತು ಪದಗಳಾಗಿ ಪರಿವರ್ತಿಸಲು ಪ್ರಯತ್ನಿಸುತ್ತೇವೆ. ನಂತರ, ಈ ಜ್ಞಾನವನ್ನು ಎಲ್ಲರಿಗೂ ಸಿಗುವಂತೆ ಮಾಡುತ್ತೇವೆ. ಈ ಜ್ಞಾನವನ್ನು ಬಳಸಿಕೊಳ್ಳಲು ಬೇಕಾದ ಮಾರ್ಗಗಳನ್ನು ಮತ್ತು ತಂತ್ರಗಳನ್ನು ಕಂಡುಹಿಡಿಯುತ್ತೇವೆ, ರೂಪಿಸುತ್ತೇವೆ. ಮೇಲಿನಿಂದ ಜ್ಞಾನವನ್ನು ಪಡೆಯುವುದು ಮಾತ್ರವಲ್ಲದೆ, ನಮಗೆ ಈಗಾಗಲೇ ಲಭ್ಯವಿರುವ ಜ್ಞಾನವನ್ನೂ ಸಂಗ್ರಹಿಸುತ್ತೆವೆ; ಅದನ್ನು ಕ್ರಮಬದ್ಧಗೊಳಿಸುತ್ತೇವೆ. ಅದು ತುಂಬಾ ದೊಡ್ಡ ಕೆಲಸ. ಇಂತಹ ಅವಕಾಶಗಳು 51000 ವರ್ಷಗಳಲ್ಲಿ ಒಂದು ಬಾರಿ ಮಾತ್ರವೇ ಬರುತ್ತದೆ. ಈ ಕೇಂದ್ರವನ್ನು ಸ್ಥಾಪಿಸಿದ ನಂತರ, 25 ವರ್ಷಗಳಾದ ಮೇಲೆ, ಈಗ ನಾನು ಸ್ವಲ್ಪ ಪ್ರಜ್ಞಾಪೂರ್ವಕವಾಗಿ ಜಾಗೃತನಾಗಿದ್ದೇನೆ; ಋಷಿಗಳು ಮುಂದಿನ 25 ವರ್ಷಗಳಿಗೆ ಗುರಿಗಳನ್ನು ನಿರ್ಧರಿಸಿದ್ದಾರೆ. ಮೊದಲು ನಾವಿಲ್ಲಿ ಒಂದು ಸಮುದಾಯವನ್ನು ಕಟ್ಟಬೇಕು. ನಾನು ಅದನ್ನು ಮಾಡಲಾಗಲಿಲ್ಲ. ಒಂದು ಸಮುದಾಯವನ್ನು ಕಟ್ಟುವುದು ಸುಲಭವಲ್ಲ, ಅದು ಕೇವಲ ಮನೆಗಳನ್ನು ಕಟ್ಟುವುದಲ್ಲ. ಅದು ಒಂದು ಜಾಗದಲ್ಲಿ ಒಟ್ಟಿಗೆ ವಾಸಮಾಡುವುದಷ್ಟೇ ಅಲ್ಲ. ಅದು ಹೃದಯಗಳನ್ನು ಹತ್ತಿರ ತರುವುದು. ಅದು ಸುಲಭವಲ್ಲ. ನಾನು ನಿಜವಾಗಿಯೂ ಯಾರನ್ನೂ ದೂಷಿಸುವುದಿಲ್ಲ. ನಾವು ಇನ್ನೂ ಬೆಳೆಯಬೇಕು, ಇನ್ನೂ ವಿಕಾಸಗೊಳ್ಳಬೇಕು. ಈ ಯೋಜನೆಯು 400 ವರ್ಷಗಳಿಗೂ ಹೆಚ್ಚಿನದಾಗಿದ್ದು ನಾವಿನ್ನೂ ಕೇವಲ 25 ವರ್ಷಗಳನ್ನಷ್ಟೇ ಕಳೆದಿದ್ದೇವೆ. ಆದುದರಿಂದ ಋಷಿಗಳು ಬಹಳ ತಾಳ್ಮೆಯಿಂದ ಕಾಯುತ್ತಾರೆ. ಟೀಕೆಮಾಡುವುದಿಲ್ಲ. ಜಡ್ಜ್ ಮಾಡುವುದಿಲ್ಲ. ಆದರೂ ಒಬ್ಬ ಮನುಷ್ಯನಾಗಿ ನಾನು ಸ್ವಲ್ಪ ನಿರಾಶೆಗೊಂಡಿದ್ದೇನೆ. ಮುಂದಿನ ವರ್ಷಗಳಲ್ಲಿ, ಬಹುಶಃ ನಾವು ಉತ್ತಮ ಸಮುದಾಯವನ್ನು ಕಟ್ಟುತ್ತೇವೆಂಬ ವಿಶ್ವಾಸ ದಿಂದಿರೋಣ.■

# ಶ್ರೀ ಜಯಂತ್ ದೇಶ್‌ಪಾಂಡೆಯವರ ಭಾಷಣದ ಆಯ್ದ ಭಾಗಗಳು

ಜಯಂತ್ ದೇಶಪಾಂಡೆ; ಅನು: ಸುಧಾಕರ್

24–5–2020

ಗುರೂಜಿಯವರು ಸಂಗೀತವನ್ನು ಎಷ್ಟೊಂದು ಪ್ರೀತಿಸುತ್ತಿದ್ದರೆಂದು ನಮಗೆಲ್ಲ ತಿಳಿದೇ ಇದೆ. ಸಂಗೀತದ ಬಗ್ಗೆ ಅವರಿಗೆ ಬಹಳಷ್ಟು ಜ್ಞಾನವಿತ್ತು ಮತ್ತು ಅವರು ತಬಲವನ್ನೂ ಬಾರಿಸುತ್ತಿದ್ದರು. ಅವರು ಬಹಳ ಸುಂದರವಾದ ಭಜನೆಗಳನ್ನು ಕೂಡ ಸಂಯೋಜಿಸುತ್ತಿದ್ದರು ಮತ್ತು ಅವರ ಕೆಲವು ಭಜನೆಗಳನ್ನು 'ಅರ್ಪಣ' ಸಿಡಿಯಲ್ಲಿ ಕೂಡ ಧ್ವನಿಮುದ್ರಿಸಲಾಗಿದೆ. ನಮ್ಮ ಪ್ರಾರಂಭದ ಸಂವಾದಗಳಲ್ಲಿ, ಒಮ್ಮೆ ಹಾಗೆಯೇ ಸಂಗೀತದ ಬಗ್ಗೆ ಮಾತನಾಡುತ್ತಿದ್ದಾಗ, ಅವರು ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತವನ್ನಷ್ಟೇ ಅಲ್ಲದೆ ಹಳೆ ಹಿಂದಿ ಗೀತೆಗಳನ್ನೂ ಮೆಚ್ಚುತ್ತಾರೆಂದು ನನಗೆ ತಿಳಿದು ಬಂದಾಗ ಅತ್ಯಂತ ಆಶ್ಚರ್ಯಚಕಿತನಾದೆ. ದಕ್ಷಿಣ ಭಾರತದ ವ್ಯಕ್ತಿಯು ಹಿಂದಿ ಗೀತೆಗಳನ್ನು ಮೆಚ್ಚುವುದಿಲ್ಲವೆಂದು ನಾನು ತಿಳಿದಿದ್ದೆ. ಅವರು ತಲತ್ ಮೆಹಮೂದ್, ಸೆಹಗಲ್, ಗುಲಾಮ್ ಅಲಿ ಮತ್ತು ಜಗಜಿತ್ ಸಿಂಗ್ ಅವರುಗಳನ್ನು ಹೆಸರಿಸಿದಾಗ ನಾನು ಸಂಪೂರ್ಣವಾಗಿ ಬೆರಗಾದೆ. ಅವರು ಪಂಡಿತ್ ಭೀಮ್‌ಸೇನ್ ಜೋಶಿಯವರನ್ನು ಎಷ್ಟೊಂದು ಇಷ್ಟಪಡುತ್ತಿದ್ದರೆಂದು ನಮಗೆಲ್ಲ ತಿಳಿದಿದೆ. ಪಂಡಿತ್ ಭೀಮ್‌ಸೇನ್ ಜೋಶಿಯವರ ಹಾಡುಗಾರಿಕೆಯನ್ನು ಆಲಿಸುವುದೆಂದರೆ ಧ್ಯಾನ ಮಾಡಿದಂತೆ ಎಂದು ಕೂಡ ಅವರು ಹೇಳಿದ್ದರು. ಪಾಶ್ಚಿಮಾತ್ಯ ಶಾಸ್ತ್ರೀಯ ಸಂಗೀತವನ್ನು ಕೂಡ ಅವರು ಮೆಚ್ಚುತ್ತಿದ್ದರು ಮತ್ತು ಅದರ ಬಗ್ಗೆ ಬಹಳಷ್ಟನ್ನು ಅರಿತಿದ್ದರು. ಯಾವುದೇ ಕ್ಷೇತ್ರದಲ್ಲಾದರೂ ಸೂಕ್ಷ್ಮ ವಿಷಯಗಳ ಬಗ್ಗೆ ಅವರಿಗೆ ವಿಶೇಷವಾದ ಅಭಿರುಚಿಯಿತ್ತು; ಅದು ಸಂಗೀತ, ಕಲೆ, ಸಿನೆಮಾ, ರಂಗಭೂಮಿ ಅಥವ ಸೃಜನಾತ್ಮಕವಾದ ಯಾವುದಾದರೂ ಆಗಿರಬಹುದು. ಮತ್ತು ಈ ಎಲ್ಲ ಕ್ಷೇತ್ರಗಳಲ್ಲೂ ಅತ್ಯುತ್ತಮವಾದವುಗಳನ್ನು ನಮಗೆ ಪರಿಚಯಿಸಿದರು.

ಒಮ್ಮೆ ಮ್ಯೂಸಿಕ್ ಸಿಸ್ಟಮ್ ಬಗ್ಗೆ ಹಾಗೆಯೇ ಮಾತನಾಡುತ್ತಿದ್ದೆವು. ಮಧ್ಯಮ ವರ್ಗದ ಹಿನ್ನೆಲೆಯಿಂದ ಬಂದ ನನ್ನ ವಿಚಾರಗಳು ಸಹಜವಾಗಿಯೇ ಇತಿಮಿತಿಯದಾಗಿದ್ದು ನಾವು ಬೆಲೆಬಾಳುವ ವಸ್ತುಗಳನ್ನು ಹೊಂದಬಾರದೆಂದು ನಂಬಿದ್ದೆ. ಅವರು ಹೇಳಿದರು, "ನೀವು ಏನಾದರೊಂದನ್ನು ಹೊಂದಲು ಸಮರ್ಥರಾಗಿದ್ದರೆ ಅದನ್ನು ಪಡೆಯಲು ಆಸೆಪಡುವುದರಲ್ಲಿ ತಪ್ಪೇನಿಲ್ಲ. ಅದು ಆಧ್ಯಾತ್ಮಿಕವಲ್ಲ ಎನ್ನಲಾಗದು." ಅವರು ಸ್ವಲ್ಪ ಹೆಚ್ಚು ದುಬಾರಿಯಾದ ಉತ್ತಮ ಮ್ಯೂಸಿಕ್ ಸಿಸ್ಟಮ್ ಕೊಳ್ಳಲು ನನಗೆ ಸಲಹೆ ನೀಡಿದರು, ಏಕೆಂದರೆ ಅದು ಸಂಗೀತದ ಅನುಭವವನ್ನು ಹೆಚ್ಚಿಸುತ್ತದೆ. ಆ ದಿನಗಳಲ್ಲಿ ನಾನು ಹೆಚ್ಚು ಸಮಯ ನನ್ನ ಕೆಲಸಗಳಲ್ಲಿ ತೊಡಗಿಕೊಂಡಿರುತ್ತಿದ್ದು ಸಂಗೀತವನ್ನು ಆಲಿಸಲು ಸಮಯವಿರುತ್ತಿರಲಿಲ್ಲವಾದ್ದರಿಂದ ಅಂತಹ ಮ್ಯೂಸಿಕ್ ಸಿಸ್ಟಮ್‌ಗೆ ನ್ಯಾಯ ಒದಗಿಸಲಾರೆ ಎಂದು ಅವರಿಗೆ ಹೇಳಿದೆ. ಅವರು ನಂತರ ಹೇಳಿದ್ದನ್ನು ಕೇಳಿ ಆಶ್ಚರ್ಯಚಕಿತನಾದೆ. ಅವರು ಹೇಳಿದರು, "ನೀವು ಕೇವಲ ಐದು ನಿಮಿಷ ಕೇಳಿದರೂ ಅದು ಉತ್ತಮ ಗುಣಮಟ್ಟದ ಅನುಭವವಾಗಿರುತ್ತದೆ, ಅನುಭವ ವರ್ಧಿಸುತ್ತದೆ. ಸಂಗೀತದ ಸೂಕ್ಷ್ಮವಾದ ಮತ್ತು ನವುರಾದ ಭಾಗಗಳೂ ಗೋಚರಿಸುತ್ತವೆ. ಕೆಲವೊಮ್ಮೆ ಹಿನ್ನೆಲೆಯಲ್ಲಿ ಬಳಸುವ ಅತ್ಯಂತ ಮೃದುವಾದ ಕೆಲವು ವಾದ್ಯಗಳ ಶಬ್ದಗಳಿರುತ್ತವೆ. ಇವೆಲ್ಲವನ್ನೂ ನಾವು ಆನಂದಿಸಬಹುದು." ನಾನು ಆಶ್ಚರ್ಯಚಕಿತನಾದೆ! ಧ್ಯಾನ ಕಲಿಸುವ ಆಧ್ಯಾತ್ಮಿಕ ಗುರುವೊಬ್ಬರು ಸಂಗೀತದ ಬಗ್ಗೆ ಸೂಕ್ಷ್ಮವಾಗಿ ಮತ್ತು ಕೂಲಂಕುಷವಾಗಿ ಗಮನಿಸಿ ಮಾತನಾಡುತ್ತಾರೆ! ನಾನು ಅವರ ಸಲಹೆಯನ್ನು ಪಾಲಿಸಿದೆ, ಅದು ಸಂಗೀತದ ಅನುಭವವನ್ನು ಹೆಚ್ಚಿಸಿತು. ಸಂಗೀತವನ್ನು ಆನಂದಿಸಬೇಕಾದರೆ ದುಬಾರಿ ಸಿಸ್ಟಮ್‌ಗಳನ್ನು ನೀವು ಹೊಂದಿರಬೇಕೆಂದು ನಾನು ಹೇಳುತ್ತಿಲ್ಲ. ಅವು ಇರಲೇ ಬೇಕಾಗಿಲ್ಲ. ಗುರೂಜಿಯವರ ಈ ದೃಷ್ಟಿಕೋನವನ್ನು ನಿಮ್ಮೊಂದಿಗೆ ಹಂಚಿಕೊಳ್ಳುವ ಹಿಂದಿರುವ ಉದ್ದೇಶವೇನೆಂದರೆ ಗುರೂಜಿಯವರ ವಿವೇಕ ಮತ್ತು ಬದುಕಿನಲ್ಲಿ ಆಚರಣೆಗೆ ತರಬಹುದಾದ ಅವರ ವಿಧಾನಗಳನ್ನು ಎತ್ತಿ ತೋರಿಸುವುದೇ ಆಗಿದೆ. ಐಶಾರಾಮಿ ಜೀವನ ಮತ್ತು ಸುಖಸಾಧನಗಳು, ನಾವು ಅವುಗಳ ಬಂಧನಕ್ಕೊಳಗಾಗದಿರುವವರೆಗೂ ತಪ್ಪೇನಿಲ್ಲ. ಹಾಗೂ, ನಮಗೆ ಸುಖಸಾಧನಗಳು ಬೇಡವೆಂದಾಕ್ಷಣ ನಾವು ಅಧ್ಯಾತ್ಮಿಕ ವ್ಯಕ್ತಿಗಳೇನಾಗುವುದಿಲ್ಲ.

ಗುರೂಜಿಯವರ ಮತ್ತೊಂದು ವಿಚಾರಧಾರೆಯನ್ನು ನಾನು ಅನೇಕ ಬಾರಿ ಹೇಳಿದ್ದೇನೆ. ಅವರು ಹೇಳಿದರು, "ಯಾರು ಕೂಡ ಶಾಶ್ವತವಾಗಿ ನಿಂದನೆಗೊಳಗಾಗುವುದಿಲ್ಲ." ನಾನು ಇದನ್ನು ತರಗತಿಯಲ್ಲಿ ಪದೇ ಪದೇ ಹೇಳುವುದಕ್ಕೆ ಕಾರಣವೆಂದರೆ ಈ ನಾಲ್ಕು ಪದಗಳ ಬೆಲೆ ನನಗೆ ಚೆನ್ನಾಗಿ ತಿಳಿದಿದೆ. ನಾವು ಹಿಂದೆ ಮಾಡಿದ್ದ ಕಾರ್ಯಗಳಿಗಾಗಿ ಅನೇಕ ವೇಳೆ ನಮ್ಮನ್ನು ನಾವು ನಿಂದಿಸಿಕೊಳ್ಳುತ್ತೇವೆ. ಈ ಪದಗಳು ಬಹಳಷ್ಟು ನೆಮ್ಮದಿ ಮತ್ತು ಭರವಸೆಯನ್ನು ತಂದುಕೊಡುತ್ತವೆ. ಈ ಆತ್ಮ–ನಿಂದನೆಯು ನಮ್ಮನ್ನು ದುಃಖಿತರನ್ನಾಗಿಸುತ್ತದೆ ಮತ್ತು ನಮ್ಮನ್ನು ಒಂದು ರೀತಿಯ ನಿರಾಶೆಯತ್ತ ಕೊಂಡೊಯ್ಯುತ್ತದೆ, ಏಕೆಂದರೆ ಹಿಂದೆ ನಡೆದದ್ದನ್ನು ಅಳಿಸಲಾಗುವುದಿಲ್ಲ. ಹಿಂದಿನದನ್ನು ಅಳಿಸಲಾಗುವುದಿಲ್ಲ ಆದರೆ ನಾವು ನಮ್ಮನ್ನು ಸರಿಪಡಿಸಿಕೊಳ್ಳಬಹುದು ಎಂದು ಅವರು ನಮಗೆ ಹೇಳಿದರು. ಆದರೆ ಅದೇ ರೀತಿಯ ಸನ್ನಿವೇಶ ನಮಗೆ ಮತ್ತೊಮ್ಮೆ ಎದುರಾದಾಗ ನಮ್ಮ ಪ್ರತಿಕ್ರಿಯೆಗಳನ್ನು ತಿದ್ದಿಕೊಳ್ಳಲು ದೇವರು ಮತ್ತೊಂದು ಅವಕಾಶ ಕೊಡುತ್ತಾನೆನ್ನುವುದು ಅದ್ಭುತ ವಿಷಯ. ಇಂತಹ ವಿಷಯಗಳು ದೇವರ ಪ್ರಪಂಚದಲ್ಲಿ ಮಾತ್ರವೇ ಸಾಧ್ಯವೆಂದು ನನಗನಿಸುತ್ತದೆ. ದೇವರ ದಯೆ, ಇರುವುದು ಒಂದೇ ಪ್ರಪಂಚ, ಅದು ದೇವರ ಪ್ರಪಂಚ.

ಈ ಸಂಬಂಧವಾಗಿ ನನಗೆ ಎರಡು ಘಟನೆಗಳು ನೆನಪಿಗೆ ಬರುತ್ತವೆ. ನಾವು ಗುರೂಜಿಯವರೊಂದಿಗೆ ನಾಗಪುರಕ್ಕೆ ಮೊಟ್ಟಮೊದಲ ಬಾರಿಗೆ ಹೋದಾಗ, ಜನರು ಅವರನ್ನು ಸಾಂಪ್ರದಾಯಿಕ ರೀತಿಯಲ್ಲಿ ಬರಮಾಡಿಕೊಂಡರು. ಅವರು ಪಾದಪೂಜೆ ಮಾಡಿದರು. ಗುರೂಜಿಯವರು ಇಂಥವುಗಳನ್ನು ಎಂದಿಗೂ ಒಪ್ಪುತ್ತಿರಲಿಲ್ಲ, ಆದರೆ ಅವರು ಅಷ್ಟೊಂದು ಪ್ರೀತಿಯಿಂದ ಮತ್ತು ಗೌರವದಿಂದ ಸಿದ್ಧತೆ ಮಾಡಿಕೊಂಡಿದ್ದರಿಂದ ಅವರನ್ನು ತಡೆಯಲು ಗುರೂಜಿಯವರಿಗೆ ಸಾಧ್ಯವಾಗಲಿಲ್ಲ. ಅವರುಗಳಿಗೆ ನೋವುಂಟುಮಾಡುವುದು ಅವರಿಗೆ ಬೇಡವಾಗಿತ್ತು. ಅವರಿಗೆ ಪಾದಪೂಜೆಗಳನ್ನು ಒಪ್ಪಿಕೊಳ್ಳುವ ಪೇಚಿನ ಸ್ಥಿತಿಯನ್ನು ಅನುಭವಿಸುವುದಕ್ಕಿಂತ ಅವರನ್ನು ನೋಯಿಸದಿರುವುದು ಹೆಚ್ಚು ಮುಖ್ಯವಾಗಿತ್ತು ಮತ್ತು ಉನ್ನತ ನಿಯಮವಾಗಿತ್ತು. ಆದರೆ, ಪಾದಪೂಜೆ ತಪ್ಪೇನಲ್ಲ, ಅದು ಸುಲಭ, ಆದರೆ ಅದು ಆಧ್ಯಾತ್ಮಿಕವಾಗಿ ನಮಗೆ ಸಹಾಯಮಾಡುವುದಿಲ್ಲವೆಂದು, ನಂತರ ಇಲ್ಲಿನ ತರಗತಿಯಲ್ಲಿ ವಿವರಿಸಿದರು. ಗುರುವನ್ನು ದೇವರಂತೆ ಪೂಜಿಸುವುದು ಸುಲಭ, ಆದರೆ ಅದು ಆಧ್ಯಾತ್ಮಿಕವಾಗಿ ನಮಗೆ ಸಹಾಯಮಾಡುವುದಿಲ್ಲ. ನಮಗೆ ಸಹಾಯಮಾಡುವ ಏಕಮಾತ್ರ ವಿಷಯವೆಂದರೆ ಗುರುವಿನ ಬೋಧನೆಗಳನ್ನು ಆಚರಣೆಗೆ ತರುವುದು.

ಈ ಪಾದಪೂಜೆಗಳಿಂದಾಗಿ ನನಗೆ ತಪ್ಪಿತಸ್ಥ ಭಾವನೆ ಮೂಡಿತು, ಏಕೆಂದರೆ ಈ ಪಾದಪೂಜೆಗಳನ್ನು ಮಾಡದಂತೆ ನಾನು ಜನರನ್ನು ತಡೆಯಬಹುದಾಗಿತ್ತು. ಗುರೂಜಿಯವರಿಗೆ ಅದನ್ನು ತಡೆಯಲು ಸಾಧ್ಯವಾಗುತ್ತಿರಲಿಲ್ಲ, ಆದರೆ ನಾನು ಅವರಿಗೆ ಮುಂಚಿತವಾಗಿಯೇ ವಿಷಯಗಳನ್ನು ತಿಳಿಸಿ ಅವರನ್ನು ಸಜ್ಜುಗೊಳಿಸಬಹುದಾಗಿತ್ತು. 'ಓ ದೇವರೇ, ನನ್ನ ಇಡೀ ಜೀವನದಲಿ ಈ ಭಾವನೆಯೊಂದಿಗೇ ಬದುಕಬೇಕಾಗುತ್ತದೆ,' ಎಂದು ನಾನು ಯೋಚಿಸಿದೆ. ಆದರೆ ದೇವರು ನನಗೆ ಮತ್ತೊಂದು ಅವಕಾಶ ನೀಡಿದ. ಗುರೂಜಿಯವರು ಮತ್ತೊಮ್ಮೆ ನಾಗಪುರಕ್ಕೆ ಭೇಟಿ ನೀಡಿದರು, ಈ ಬಾರಿ ಜನರಿಗೆ ಅತಿ ಸಮರ್ಪಕವಾಗಿ ವಿಷಯಗಳನ್ನು ತಿಳಿಸಿ, ಅವರನ್ನು ಸಿದ್ಧಗೊಳಿಸಲು ನನಗೆ ಸಾಧ್ಯವಾಯಿತು. ಜನರು ಅವರನ್ನು ಅತಿ ಸಮರ್ಪಕವಾಗಿ ಪ್ರೀತ್ಯಾದರಗಳಿಂದ ಸ್ವಾಗತಿಸಿದರು. ಅವರು ಪಾದಪೂಜೆ ಮಾಡಲಿಲ್ಲ. ಅವರು ಈ ಮಾರ್ಗದ ಧ್ಯಾನಿಗಳಲ್ಲವಾದರೂ, ಈ ಪ್ರಕ್ರಿಯೆಗಳಲ್ಲಿ, ಪಾದಪೂಜೆಗಳಂಥವುಗಳು ಉಪಯುಕ್ತವಲ್ಲವೆಂದು ಕಲಿತರು. ಬೆಳೆಯಲು ಮತ್ತು ಆಧ್ಯಾತ್ಮಿಕ ಸಾಧನೆಯ ಬಗೆಗಿನ ತಪ್ಪುಗ್ರಹಿಕೆಗಳನ್ನು ಹೋಗಲಾಡಿಸಲು ಮಾಸ್ಟರ್‌ಗಳು ಈ ರೀತಿಯಲ್ಲಿಯೇ ಜನರಿಗೆ ಸಹಾಯಮಾಡುವುದು.

ಹೇಗೇ ಆದರೂ, ಈಗ ಕೂಡ, ನನ್ನ ಜೀವನದಲ್ಲಿ ನಾನು ವಿಷಾದಪಡುವಂತಹ ಬದುಕಿನ ಕ್ಷಣಗಳಿವೆ. ನಾನು ಅವುಗಳನ್ನು ಮರೆಯಬಯಸುತ್ತೇನೆ. ನಾನು ಜನರಲ್ಲಿ ಕ್ಷಮಾಪಣೆ ಕೇಳಬಯಸುತ್ತೇನೆ, ಆದರೆ ಅದಕ್ಕೆ ಸಮಯ ಮೀರಿದೆ. ಅದರೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವುದು ಹೇಗೆ? ಅದಕ್ಕೆ ಮತ್ತೊಂದು ಮಾರ್ಗವನ್ನು ಗುರೂಜಿಯವರು ಕೊಟ್ಟಿದ್ದಾರೆ. ನಮಗೆ ಸಾಧ್ಯವಾಗದಿದ್ದಾಗ, ನಾವು ವ್ಯಕ್ತಿಗತವಾಗಿ ಕ್ಷಮಾಪಣೆ ಕೇಳಬೇಕಾಗಿಲ್ಲ, ಆದರೆ ನಾವು ಮೌನವಾಗಿ ದೇವರಲ್ಲಿ ಕ್ಷಮಾಪಣೆ ಕೇಳಬಹುದು. ದೇವರನ್ನು ಸಾಕ್ಷಿಯಾಗಿಸಿಕೊಂಡು, ಆ ವ್ಯಕ್ತಿಗೆ ಮೌನವಾಗಿ ಕ್ಷಮಾಪಣೆ ಕೇಳಬಹುದು. ನಮ್ಮ ಕಳೆದುಹೋದ ಘಟನೆಗಳೊಂದಿಗೆ ಹೊಂದಿಕೊಳ್ಳಲು ಸಹಾಯ ಮಾಡುವುದಕ್ಕಾಗಿ, ಗುರೂಜಿಯವರು ನಮಗೆ ಕಲಿಸಿರುವ ಗಹನವಾದ ವಿಷಯಗಳಲ್ಲಿ ಇವುಗಳು ಕೆಲವು. ಬೇರೆಯವರು ಮಾಡಿದ ತಪ್ಪುಗಳ ವಿಷಯಗಳಲ್ಲೂ ಇದು ಸತ್ಯ. ಅವರುಗಳು ಕೂಡ ಶಾಶ್ವತವಾಗಿ ನಿಂದನೆಗೊಳಪಡಬಾರದು. ನನ್ನನ್ನು ನಾನೇ ಸರಿಪಡಿಸಿಕೊಳ್ಳಲು ನನಗೆ ಅವಕಾಶ ಇರುವಂತೆಯೇ ಅವರುಗಳಿಗೆ ಕೂಡಾ ತಮ್ಮನ್ನು ತಾವೇ ಸರಿಪಡಿಸಿಕೊಳ್ಳಲು ಅವಕಾಶವಿದೆ.

(ಮುಂದಿನ ಪುಟದಲ್ಲಿ ಮುಂದುವರೆದಿದೆ)

## ಶ್ರೀ ಜಯಂತ್ ದೇಶ್‌ಪಾಂಡೆಯವರ ಭಾಷಣದ ಆಯ್ದ ಭಾಗಗಳು

ಜಯಂತ್ ದೇಶಪಾಂಡೆ; ಅನು: ಸುಧಾಕರ್

(ಪುಟ 5ರಿಂದ ಮುಂದುವರೆದಿದೆ)

ಇಂತಹದ್ದೇ ಮತ್ತೊಂದು ಗಹನವಾದ ವಿಷಯ ನನ್ನ ಮನಸ್ಸಿಗೆ ಬರುತ್ತದೆ. ಅವರು ಹೇಳಿದರು, "ನೀವು ಸಕಾರಾತ್ಮಕವಾಗಿ ಬದುಕಿ ಪ್ರೀತಿಯನ್ನು ಅಭಿವ್ಯಕ್ತಿಸಿದಾಗ ನೀವು ಋಷಿಗಳಿಗಾಗಿ ಕೆಲಸ ಮಾಡುತ್ತಿರುತ್ತೀರಿ." ತಪೋನಗರಕ್ಕೆ ಬಂದು ವಾಸಮಾಡಲು ಸಾಧ್ಯವಾಗದಿದ್ದಾಗ, ಅನೇಕ ಸಲ ಜನರು ದುಃಖಪಡುತ್ತಾರೆ. ಋಷಿಗಳಿಗಾಗಿ ಕೆಲಸ ಮಾಡಲಾಗುತ್ತಿಲ್ಲವೆಂದು ಜನರು ದುಃಖಪಡುತ್ತಾರೆ. ಅಂತಹ ಸಮಯಗಳಲ್ಲಿ ಈ ವಿಷಯವನ್ನು ಅವರಿಗೆ ತಿಳಿಸಲು ಪ್ರಯತ್ನಿಸುತ್ತೇನೆ. ಅದು ಅವರನ್ನು ಸಮಾಧಾನಪಡಿಸುವುದಕ್ಕಾಗಿ ಅಲ್ಲ, ಆದರೆ ಸತ್ಯವನ್ನು ಅವರಿಗೆ ತಿಳಿಸುವುದಕ್ಕಾಗಿ. ಸಕಾರಾತ್ಮಕತೆ, ಪ್ರೀತಿ ಮತ್ತು ಶಾಂತಿಯ ತರಂಗಗಳನ್ನು ನಾವು ಹೊರ ಹೊಮ್ಮಿಸುತ್ತಿದ್ದರೆ, ನಾವು ಅದ್ಭುತ ಚೈತನ್ಯಗಳನ್ನು ಚಾನಲ್ ಮಾಡುತ್ತಿರುತ್ತೇವೆ. ನಾವು ಋಷಿಗಳ ಚಾನಲ್‌ಗಳಾಗುತ್ತೇವೆ. ತಪೋನಗರದಲ್ಲಿ ವಾಸ ಮಾಡುವುದಕ್ಕಿಂತ ತಪೋನಗರಕ್ಕೆ ಶ್ರುತಿಗೊಳ್ಳುವುದು ಬಹು ಮುಖ್ಯ. ಇಂತಹ ಗಹನವಾದ ವಿಚಾರಗಳು ಮತ್ತು ಋಷಿಗಳ ವಿವೇಕಗಳನ್ನಷ್ಟೇ ಅಲ್ಲದೆ, ಸಂಪುಟಗಟ್ಟಲೆ ಜ್ಞಾನವನ್ನೂ ಅವರು ನಮಗೆ ಕೊಟ್ಟಿದ್ದಾರೆ. ಈ ಜ್ಞಾನವು ಮುಂದಿನ ಪೀಳಿಗೆಗೂ ಉಪಯುಕ್ತವಾಗುತ್ತದೆ. ಗುರೂಜಿಯವರು ಅವರ ಬದುಕಿನ ಮೂಲಕವೂ ನಮಗೆ ಬಹಳಷ್ಟನ್ನು ಕಲಿಸಿದ್ದಾರೆ.

ಇಂತಹ ಬಹುಮುಖ ವ್ಯಕ್ತಿತ್ವದ ಮತ್ತು ಆಧ್ಯಾತ್ಮಿಕ ಬದುಕಿನ ಎಲ್ಲ ಆಯಾಮಗಳನ್ನು ಅಷ್ಟೊಂದು ಉತ್ಸಾಹದಿಂದ ನಮಗೆ ಕಲಿಸುವ ಶ್ರಮವನ್ನು ತೆಗೆದುಕೊಳ್ಳುವ ಗುರುಗಳು ಇದ್ದಾರೆಯೇ ಎಂದು ಆಶ್ಚರ್ಯಪಡುತ್ತೇನೆ. ಅಂಥವರೊಬ್ಬರನ್ನು ಪಡೆದಿರುವ ನಾವೇ ಧನ್ಯರು.

ಇಂತಹ ಕಷ್ಟದ ಸಮಯಗಳಲ್ಲಿ ಗುರೂಜಿಯವರು ಭೌತಿಕವಾಗಿ ನಮ್ಮೊಂದಿಗೆ ಇರಬೇಕಾಗಿತ್ತೆಂದು ಬಹಳವಾಗಿ ಹಂಬಲಿಸುತ್ತೇವೆ. ಆದರೆ ಅವರು, ಪ್ರಪಂಚವು ಈಗ ಎದುರಿಸುತ್ತಿರುವ ಸವಾಲುಗಳಿಗೆ ಒಂದು ರೀತಿಯಲ್ಲಿ ನಮ್ಮನ್ನು ಸಿದ್ಧಗೊಳಿಸಿದ್ದರು. ನಾವು ಸತ್ಯಯುಗವನ್ನು ಪ್ರವೇಶಿಸುವ ಮೊದಲು, ಪ್ರಕ್ಷುಬ್ಧತೆಯ ಸಮಯ ಮತ್ತು ತೀವ್ರ ಪ್ರಳಯದ ಸಮಯಗಳನ್ನು ಎದುರಿಸಬೇಕಾಗುತ್ತದೆಂದು ಅವರು ನಮಗೆ ತಿಳಿಸಿದ್ದರು. ನಾವು ಹಲವಾರು ನೋವಿನ ಸಂಗತಿಗಳನ್ನು ಮತ್ತು ಅನೇಕ ಸಾವುಗಳನ್ನು ಕೂಡ ನೋಡಬೇಕಾಗಬಹುದು. ವ್ಯವಸ್ಥೆಗಳು ಕುಸಿಯುತ್ತಿರುವುದನ್ನು ಮತ್ತು ಈ ಕುಸಿತಗಳಿಂದುಂಟಾಗುವ ಅವ್ಯವಸ್ಥೆ ಮತ್ತು ಅನಿಶ್ಚತತೆಗಳನ್ನು ನಾವು ನೋಡಬೇಕಾಗುವುದು.

ನಮಗೆ ಸಹಾಯ ದೊರೆಯುತ್ತದೆಯೆಂಬ ಆಶ್ವಾಸನೆಯನ್ನು ಅವರು ನೀಡಿದ್ದರು. ಈ ಘಟನೆಗಳು ಏಕೆ ಸಂಭವಿಸುತ್ತವೆ ಎಂಬುದನ್ನು ನಮಗೆ ಬಹಳ ಸ್ಪಷ್ಟವಾಗಿ ವಿವರಿಸಿದ್ದರು. ನಾವು ಹೊಸಯುಗವನ್ನು ಪ್ರವೇಶಿಸುತ್ತಿದ್ದೇವೆ ಮತ್ತು ಋಷಿಗಳು ಮಹಾನ್ ಅವಕಾಶಗಳನ್ನು ಸೃಷ್ಟಿಸುವಂತಹ ಅದ್ಭುತವಾದ ಹೊಸ ಚೈತನ್ಯಗಳಿಂದ ಈ ಭೂಮಿಯನ್ನು ತುಂಬುತ್ತಿದ್ದಾರೆ. ನಾವು ಶೀಘ್ರವಾಗಿ ಆಧ್ಯಾತ್ಮಿಕ ಪ್ರಗತಿಯನ್ನು ಸಾಧಿಸಬಹುದು. ಈ ಹೊಸ ಚೈತನ್ಯಗಳ ಪ್ರಭಾವ ಹೇಗಿರುತ್ತದೆಯೆಂದರೆ ನಮ್ಮ ಕಾರ್ಯಗಳಿಂದುಂಟಾಗುವ ಕರ್ಮಗಳ ಪರಿಣಾಮಗಳು ಅತಿ ಶೀಘ್ರವಾಗಿರುತ್ತವೆ, ಅದರ ಅರ್ಥ ನಮ್ಮ ಕಾರ್ಯಗಳ ಪರಿಣಾಮಗಳನ್ನು ಅತಿ ಶೀಘ್ರವಾಗಿ ಈ ಜನ್ಮದಲ್ಲಿಯೇ ಅನುಭವಿಸಬೇಕಾಗುತ್ತದೆ, ಬಹುಶಃ ಕೆಲವೇ ದಿನಗಳಲ್ಲಿ ಅಥವ ಅದಕ್ಕೂ ಮುಂಚಿತವಾಗಿ. ಆದ್ದರಿಂದ ಒಟ್ಟಾರೆ ಮನುಕುಲವು ಹೊಸ ಚೈತನ್ಯಗಳನ್ನು ಒಪ್ಪಿಕೊಳ್ಳದೆ ಅಜ್ಞಾನದ ವಿಧಾನದ ಬದುಕನ್ನೇ ಬಿಡದೆ ಮುಂದುವರಿಸಿದರೆ, ಅದರ ಕಾರ್ಯಗಳ ಪರಿಣಾಮಗಳನ್ನು ಅತಿ ಶೀಘ್ರವಾಗಿ ಅನುಭವಿಸಬೇಕಾಗುತ್ತದೆ. ನಾನು ಅರ್ಥಮಾಡಿಕೊಂಡಿರುವಂತೆ, ಒಟ್ಟಾರೆ ಮನುಕುಲವು ಈಗ ಈ ಸವಾಲುಗಳನ್ನು ಏಕೆ ಎದುರಿಸುತ್ತಿದೆ ಎನ್ನುವುದಕ್ಕೆ ಇದೇ ವಿವರಣೆ. ಹಾಗೆಯೇ ಇದು, ನಮ್ಮ ತಪ್ಪುಗಳನ್ನು ಅರಿತುಕೊಂಡು, ತಪ್ಪಾಗಿದೆಯೆಂದು ಪ್ರಾಮಾಣಿಕವಾಗಿ ಅರಿತುಕೊಂಡು ದೇವರಲ್ಲಿ ಕ್ಷಮಾಪಣೆ ಕೇಳಿ ನಮ್ಮ ಕರ್ಮಗಳನ್ನು ಪರಿಹರಿಸಿಕೊಳ್ಳುವ ಅವಧಿ ಕೂಡ ಆಗಿದೆ. ಹಾಗೆ ನೋಡಿದಾಗ ಈ ಚೈತನ್ಯಗಳು ಅತ್ಯಂತ ದಯಾಪರವಾಗಿವೆ. ನಾವು ನಂಬಿಕೆ ಕಳೆದುಕೊಳ್ಳಬಾರದು, ಏಕೆಂದರೆ ಈ ಅವ್ಯವಸ್ಥೆಯೊಳಗಿನಿಂದ ಒಳ್ಳೆಯದು ಹೊರಹೊಮ್ಮುತ್ತದೆ. ಆ ರೀತಿ ಆಗುತ್ತಿರುವುದನ್ನು ನಾವು ನೋಡಬಹುದು.

ಧ್ಯಾನದ ಪ್ರಾಮುಖ್ಯತೆಯನ್ನು ಕೂಡ ಜನರು ಅರಿತುಕೊಳ್ಳುತ್ತಿದ್ದಾರೆ. ನನ್ನ ಧ್ಯಾನಿ ಮಿತ್ರರುಗಳಲ್ಲೊಬ್ಬರು, ಅತ್ಯಂತ ಅನುಭವ ಮತ್ತು ಅರ್ಹತೆಯುಳ್ಳ ವೈದ್ಯರುಗಳು ಮತ್ತು ಆಧ್ಯಾತ್ಮಿಕ ಗುರುವೊಬ್ಬರ ನಡುವಿನ ಚರ್ಚೆಯ ವಿಡಿಯೋವನ್ನು ನನ್ನೊಂದಿಗೆ ಹಂಚಿಕೊಂಡರು. ಮಾನವ ದೇಹದ ಮೇಲೆ ಧ್ಯಾನವು ಉಂಟುಮಾಡುವ ಪರಿಣಾಮದ ಮೇಲೆ ಈ ವೈದ್ಯರುಗಳು ಅಧ್ಯಯನ ಮಾಡುತ್ತಿದ್ದಾರೆ. ಕೇವಲ ಕೆಲವೇ ದಿನದ ಧ್ಯಾನವು, ನಮ್ಮ ಶರೀರದಲ್ಲಿನ ಯಾವುದೇ ವೈರಾಣುವಿನ ಸೋಂಕನ್ನು ಎದುರಿಸಲು ಸಹಾಯ ಮಾಡುವ ಜೀನ್‌ಗಳನ್ನು (genes) ಚಾಲನೆಗೊಳಿಸುವುದಕ್ಕೆ ಕಾರಣವಾದುದನ್ನು ಅವರು ಗಮನಿಸಿದರು. ಅದು ನಮ್ಮ ದೇಹದೊಳಗೇ anti-oxidant ಪ್ರತಿಕ್ರಿಯೆಯನ್ನು ಉತ್ಪತ್ತಿ ಮಾಡುವುದಕ್ಕೆ ಸಹಾಯ ಮಾಡುತ್ತದೆ. ಅದು ರೋಗಿಗೆ ಸೋಂಕು ತಗುಲಿದ್ದು ಅವನ ಶರೀರದಲ್ಲಿ ಆಮ್ಲಜನಕವನ್ನು ಹೀರಿಕೊಳ್ಳುವ ಸಮಸ್ಯೆಯಿದ್ದಾಗ ಬಹಳಷ್ಟು ಸಹಾಯವಾಗುತ್ತದೆ. ಈ ರೀತಿಯ ಅಧ್ಯಯನ ಅತಿ ಮುಖ್ಯ ಮತ್ತು ಈ ಸಂಶೋಧನೆಗಳು ಅತ್ಯಂತ ಬೆಲೆಯುಳ್ಳದ್ದು. ಕೇವಲ ಸ್ವಲ್ಪ ದಿನಗಳ ಧ್ಯಾನಗಳೇ ಇಷ್ಟೊಂದು ಸಹಾಯ ಮಾಡುವಾಗ ನಿಯತವಾಗಿ ಮಾಡುವ ಧ್ಯಾನಗಳು ನಮಗೆ ಎಷ್ಟೊಂದು ಸಹಾಯ ಮಾಡಬಹುದೆಂಬುದನ್ನು ನೀವೇ ಊಹಿಸಿಕೊಳ್ಳಿ. ಈಗ ಅನೇಕ ವಿಷಯಗಳು ಘಟಿಸುತ್ತಿವೆ, ಅದೂ ಅತಿ ವೇಗವಾಗಿ. ಇಲ್ಲಿ ನಾವು ಕಲಿತಿರುವ ಅದ್ಭುತ ವಿಷಯಗಳನ್ನು ಗಂಭೀರವಾಗಿ ಪರಿಗಣಿಸಿ ಅವುಗಳನ್ನು ಆಚರಣೆಗೆ ತರಲು ಇದು ಸರಿಯಾದ ಸಮಯ. ■

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರುವವರಿಗೆ ಅಂಚೆ ಮತ್ತು ಇ-ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲೀಷ್‌ನಲ್ಲಿ (ವರ್ಷಕ್ಕೆ ರೂ. 2500), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 1300) ಪಾಠಗಳನ್ನು ಕಳುಹಿಸಲಾಗುವುದು. ಭಾರತ ದೇಶದಿಂದ ಹೊರಗೆ ವಾಸವಾಗಿರುವ ವಿದ್ಯಾರ್ಥಿಗಳ ವಾರ್ಷಿಕ ರಿಜಿಸ್ಟ್ರೇಶನ್ ಫೀಯು ರೂ. 4500. ಈ ಫೀನಲ್ಲಿ ವಾರ್ತಾಪತ್ರದ ಒಂದು ವರ್ಷದ ಚಂದಾದಾರಿಕೆ ಮತ್ತು ಪಠ್ಯಪುಸ್ತಕಗಳು ಸೇರಿದೆ.

ನಂತರ, ರಿಜಿಸ್ಟ್ರೇಶನ್‌ನ ವಾರ್ಷಿಕ ನವೀಕರಣದ ಫೀ ಇಂಗ್ಲೀಷ್ (ವರ್ಷಕ್ಕೆ ರೂ. 2000), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 900). ಭಾರತ ದೇಶದಿಂದ ಹೊರಗೆ ವಾಸವಾಗಿರುವ ವಿದ್ಯಾರ್ಥಿಗಳ ರಿಜಿಸ್ಟ್ರೇಶನ್‌ನ ವಾರ್ಷಿಕ ನವೀಕರಣದ ಫೀಯು ರೂ. 3500. ಈ ಫೀನಲ್ಲಿ ವಾರ್ತಾಪತ್ರದ ಒಂದು ವರ್ಷದ ಚಂದಾದಾರಿಕೆ ಸೇರಿದೆ.

- ★ ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ-ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿ ಕೊಡಲಾಗುವುದು.
- ★ ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ★ ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ★ ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

ಚೆಕ್/ಡಿಡಿಗಳನ್ನು 'Manasa Light Age Foundation' ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.

### ಗುರೂಜಿಯವರಿಂದ ವಿಶೇಷ ಸೂಚನೆಗಳು

- ★ ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ★ ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ★ ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ★ ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ★ ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿ ಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

# ಪ್ರಶ್ನೋತ್ತರಗಳು

ಸಂ: ಶೋಭಾ ಕೆ. ರಾವ್; ಅನು: ಪಾಂಡುರಂಗ

**ಪ್ರ: ನನ್ನೊಳಗಿರುವ ಚೈತನ್ಯದ ಮಟ್ಟ ಬಹಳ ತೀವ್ರವಾಗಿ ಕ್ಷೀಣಿಸುತ್ತಿದೆ. ಇದು ಏಕೆ ಹೀಗಾಗುತ್ತದೆಂದು ನನಗೆ ಗೊತ್ತಾಗುತ್ತಿಲ್ಲ. ಬಹಳ ದುರ್ಬಲನಾದಂತೆ ಅನಿಸುತ್ತದೆ ಮತ್ತು ಅಭದ್ರತೆಯ ಭಾವನೆ ಮೂಡುತ್ತದೆ. ದಯವಿಟ್ಟು ನನಗೆ ಮಾರ್ಗದರ್ಶನ ನೀಡಿ.**

ಉ: ಇಂಥ ಪ್ರಶ್ನೆಗಳಿಗೆ ಉತ್ತರಿಸುವುದು ಕಷ್ಟ. ಕಾರಣ ಅನೇಕ ವಿವರಗಳು ನಮಗೆ ಗೊತ್ತಿರುವುದಿಲ್ಲ. ನಾವು ಕೇವಲ ಸಾರ್ವತ್ರಿಕವಾಗಿ ಹೇಳಬಹುದು. ಒಂದು ವೇಳೆ ನಮ್ಮ ಆಲೋಚನೆಗಳು, ಭಾವನೆಗಳು ಸಕಾರಾತ್ಮಕವಾಗಿರದಿದ್ದರೆ, ಅವು ನಮ್ಮ ಚೈತನ್ಯಗಳನ್ನು ಬರಿದು ಮಾಡಬಹುದು. ನಮಗೆ ಗೊತ್ತಿರುವಂತೆ ನಕಾರಾತ್ಮಕ ಭಾವನೆಗಳು ಮತ್ತು ಆಲೋಚನೆಗಳು ಖಿನ್ನತೆಗೆ ಒಳಗಾಗುವಂತೆ ಮಾಡುತ್ತವೆ. ನಕಾರಾತ್ಮಕ ಭಾವನೆಗಳು ಮತ್ತು ಆಲೋಚನೆಗಳು ನಮ್ಮಲ್ಲಿನ ಬಹಳಷ್ಟು ಚೈತನ್ಯಗಳನ್ನು ಕ್ಷೀಣಿಸುವಂತೆ ಮಾಡಿ ಅಭದ್ರತೆಯನ್ನ ಅನುಭವಿಸುವಂತೆ ಮಾಡುತ್ತವೆ. ಯಾವಾಗ ಈ ಅಭದ್ರತೆ ನಮ್ಮನ್ನು ಕಾಡಲಾರಂಭಿಸುತ್ತದೆಯೋ ಆಗ ನಾವು ಗುರೂಜಿಯವರ ಈ ಮಾತುಗಳನ್ನು ನೆನಪಿಸಿಕೊಳ್ಳಬೇಕು, "ದೇವರು ಪ್ರತಿಯೊಬ್ಬ ವ್ಯಕ್ತಿಯ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಾನೆ. ನನಗದು ಕಾಣುತ್ತಿದೆ." ಇದನ್ನು ನಾವು ಅರ್ಥ ಮಾಡಿಕೊಂಡು ಒಪ್ಪಿಕೊಳ್ಳಬೇಕು. ಆಗ ನಮಗೆ ಅಭದ್ರತೆಯ ಭಾವನೆ ಬರುವುದಿಲ್ಲ. ನಾವು ಧ್ಯಾನ ಮಾಡುತ್ತಾ ಸಕಾರಾತ್ಮಕರಾಗಬೇಕು. ನಮ್ಮ ಬದುಕಿನ ಯಾವುದಾದರೊಂದು ಸಮಯದಲ್ಲಿ ನಾವೆಲ್ಲರೂ ಇಂಥ ಕಷ್ಟಕರ ಪರಿಸ್ಥಿತಿಗಳನ್ನು ಎದುರಿಸಬೇಕಾಗುತ್ತದೆ. ಆದರೆ, ಇಂಥ ಕಷ್ಟಕರ ಪರಿಸ್ಥಿತಿಗಳಿಂದ ನಾವು ಪಾರಾಗುತ್ತೇವೆನ್ನುವುದು ಕೂಡ ಸತ್ಯ. ಯಾವಾಗಲೂ ನಾವು ಸಹಾಯವನ್ನು ಖಂಡಿತವಾಗಿ ಪಡೆಯುತ್ತೇವೆ.

**ಪ್ರ: ಗುರುವಿನಲ್ಲಿ ಅಥವ ದೇವರಲ್ಲಿ ನಾವು ಹೇಗೆ ನಂಬಿಕೆಯನ್ನು ಹೆಚ್ಚಿಸಿಕೊಳ್ಳಬಹುದು?**

ಉ: ನಾನು ಅರ್ಥ ಮಾಡಿಕೊಂಡಿರುವುದನ್ನು ಮತ್ತು ನಾನು ಹಾದು ಹೋದ ಪ್ರಕ್ರಿಯೆಯನ್ನು ನಿಮ್ಮ ಮುಂದಿಡುತ್ತೇನೆ. ನಾನು ಅರ್ಥ ಮಾಡಿಕೊಂಡಿರುವಂತೆ, ಸತ್ಯವನ್ನು ಅರಿತಾಗ ನಂಬಿಕೆ ಬರುತ್ತದೆ. ಒಂದು ರೀತಿಯ ಆಳವಾದ ಅರಿವಿನಿಂದ ಅದು ಮೂಡಿಬರುತ್ತದೆ. ಒಂದು ವೇಳೆ ನಮಗೆ ಸತ್ಯದ ಅನುಭವ ಆದರೆ, ಸಹಜವಾಗಿ ನಾವು ನಂಬಿಕೆಯನ್ನು ಬೆಳೆಸಿಕೊಳ್ಳುತ್ತೇವೆ. ಅದೇ ರೀತಿ ನಮಗೆ ದೇವರ ಅನುಭವ ಆದಾಗ, ದೇವರು ಸರ್ವಶಕ್ತನೆಂದು ಅರ್ಥ ಮಾಡಿಕೊಳ್ಳುತ್ತೇವೆ. ಅವನು ಅತ್ಯುನ್ನತ. ಅವನು ಅತ್ಯುನ್ನತ ಬುದ್ಧಿಶಕ್ತಿ ಉಳ್ಳವನು. ದೇವರು ಷರತ್ತುರಹಿತ ಪ್ರೀತಿಯ ಸಾಗರ. ಇವೆಲ್ಲವನ್ನೂ ನಾವು ಅರಿತುಕೊಂಡಾಗ ಸಹಜವಾಗಿಯೇ ನಾವು ದೇವರನ್ನು ನಂಬುತ್ತೇವೆ. ಆದರೆ ಇದನ್ನು ಅರಿತುಕೊಳ್ಳಬೇಕಾದರೆ ಅವನ ಅನುಭವವಾಗಬೇಕು. ಅವನ ಅನುಭವವಾಗಬೇಕಾದರೆ ನಾವು ಧ್ಯಾನ ಮಾಡಬೇಕು. ಸಹಜವಾಗಿಯೇ ನಮ್ಮ ಅಂತರ್ಬೋಧೆಯಿಂದ ಕೂಡ ಇದನ್ನು ಕಂಡುಕೊಳ್ಳಬಹುದು. ನಮ್ಮ ಅಂತರ್ಬೋಧೆಯಿಂದ ಅವನನ್ನು ತಿಳಿಯಬಹುದೆಂದು ನಾನು ನಂಬುತ್ತೇನೆ, ಪೂರ್ಣವಾಗಿಯಲ್ಲದಿದ್ದರೂ ಸ್ವಲ್ಪ ಮಟ್ಟಿಗೆ ತಿಳಿಯುತ್ತೇವೆ. ಅದು ನಂಬಿಕೆಯುಂಟುಮಾಡುತ್ತದೆ. ನಮ್ಮ ಆಧ್ಯಾತ್ಮಿಕ ಪಯಣ ಅಥವಾ ಸಾಧನೆ ಪ್ರಾರಂಭಿಸಿದಾಗ, ಅದರ ಪ್ರಕ್ರಿಯೆಗಳಲ್ಲಿ ಮತ್ತು ನಾವು ಅನುಸರಿಸುತ್ತಿರುವ ವ್ಯವಸ್ಥೆಯಲ್ಲಿ ನಮಗೆ ನಂಬಿಕೆ ಇರಬೇಕು. ನಂಬಿಕೆ ಇಡುವುದು ಕಷ್ಟವೆನಿಸಿದರೆ, ಕೊನೆಯ ಪಕ್ಷ ಪ್ರಯೋಗ ಮಾಡುವುದಕ್ಕಾಗಿ, ಪ್ರಯತ್ನಿಸುವುದಕ್ಕಾಗಿಯಾದರೂ ತೆರೆದ ಮನಸ್ಸುಳ್ಳವರಾಗಿರಬೇಕು. ತೆರೆದ ಮನಸ್ಕರಾಗಿದ್ದಾಗ, ಧ್ಯಾನದ ಅನುಭವ ಪಡೆಯುವುದು ಸುಲಭವಾಗುತ್ತದೆ. ನಂತರ ಅನುಭವಿಸುತ್ತಾ ಹೋದಂತೆಲ್ಲಾ, ಹೆಚ್ಚು ಅರ್ಥ ಮಾಡಿಕೊಳ್ಳುತ್ತಾ ಹೋದಂತೆಲ್ಲಾ, ನಮ್ಮಲ್ಲಿ ನಂಬಿಕೆ ಮೂಡುತ್ತದೆ.


ಗುರುವಿನ ಬಗ್ಗೆ ನಾವು ನಂಬಿಕೆಯನ್ನು ಬೆಳೆಸಿಕೊಳ್ಳುವುದು ಹೇಗೆ? ನನಗನಿಸುತ್ತಿರುವಂತೆ, ಇಲ್ಲೂ ಸಹ ಅದೇ ಪ್ರಕ್ರಿಯೆ ಅನ್ವಯಿಸುತ್ತದೆ. ನಾವು ಗುರುವಿನ ಹತ್ತಿರ ಬಂದಾಗ, ಹೇಗೋ ನಮ್ಮ ಅಂತರ್ಬೋಧೆಯಿಂದ ಇವರೇ ನಮ್ಮ ಗುರುವೆಂದು ನಮಗೆ ಗೊತ್ತಾಗುತ್ತದೆ. ನಾನು ಭಾವಿಸಿರುವಂತೆ ನಮ್ಮಲ್ಲಿರುವ ಬಹಳಷ್ಟು ಜನರಿಗೆ ಗುರೂಜಿಯವರ ಸಂಪರ್ಕಕ್ಕೆ ಬಂದಾಗ ಹೀಗೇ ಆಗಿರಬೇಕು. ನಾವು ಗುರೂಜಿಯವರನ್ನು ಭೇಟಿ ಮಾಡಿದೆವು, ನಮಗೆ ಅಷ್ಟೇ ಸಾಕಾಯಿತು. ಆ ಒಂದು ಚಿಕ್ಕ ಭೇಟಿಯಲ್ಲಿ, ಇವರೇ ನಮ್ಮ ಗುರು ಎಂದು ನಮಗೆ ಗೊತ್ತಾಯಿತು. ಅದು ನಮಗೆ ಹೇಗೆ ಗೊತ್ತಾಯಿತು? ಅಂತರ್ಬೋಧೆಯಿಂದ ನಮಗೆ ತಿಳಿಯಿತು, ಆ ದಿನದಿಂದಲೇ ಅವರಲ್ಲಿ ನಾವು ನಂಬಿಕೆ ಬೆಳೆಸಿಕೊಂಡೆವು. ತಿಳಿದುಕೊಳ್ಳುವುದರಿಂದ ನಮ್ಮಲ್ಲಿ ನಂಬಿಕೆ ಹುಟ್ಟುತ್ತದೆ.

ನಮ್ಮಲ್ಲಿ ಅನೇಕರು ಹಿಂದಿನ ಜನ್ಮಗಳಲ್ಲಿಯೇ ಗುರೂಜಿಯವರನ್ನು ಭೇಟಿ ಮಾಡಿದ್ದೇವೆ, ಆದ್ದರಿಂದ ನಮಗೆ ಗುರೂಜಿಯವರ ಪರಿಚಯವಿದೆ. ಆದರೆ ಯಾರಾದರೊಬ್ಬರು ಅವರನ್ನು ಮೊದಲ ಸಲ ಭೇಟಿ ಮಾಡುತ್ತಿದ್ದಾರೆ ಅಂದು ಕೊಳ್ಳೋಣ. ಆಗ ಏನಾಗಬಹುದು? ಅದೇ ಪ್ರಕ್ರಿಯೆ ಇಲ್ಲಿಯೂ ಅನ್ವಯಿಸುತ್ತದೆ. ನಾವು ತೆರೆದ ಮನಸ್ಸನ್ನು ಹೊಂದಬೇಕು. ಮತ್ತು ನಿಧಾನವಾಗಿ ಅವರ ಸಹಯೋಗದಿಂದ ಹೆಚ್ಚು ಅರ್ಥ ಮಾಡಿಕೊಳ್ಳುತ್ತೇವೆ. ಅವರು ಪ್ರಾಮಾಣಿಕ ಗುರುವೆಂದು ನಮಗೆ ತಿಳಿದರೆ, ಸಹಜವಾಗಿಯೇ ನಾವು ಅವರಲ್ಲಿ ನಂಬಿಕೆಯನ್ನು ಬೆಳೆಸಿಕೊಳ್ಳುತ್ತೇವೆ.■


## ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| Higher Communication & Other Realities | 100/- |
| Light Body & Other Realities | 100/- |
| Master-Pupil Talks | 60/- |
| Master-Pupil Talks - Vol 2 | 75/- |
| iGuruji Vol 1,3,4 & 7 | each 150/- |
| iGuruji - Vol 2 | 120/- |
| iGuruji - Vol 5 | 100/- |
| iGuruji - Vol 6 | 75/- |
| Living in the Light of My Guru | 220/- |
| How to Meditate | 50/- |
| Dhyana Yoga | 50/- |
| Descent of Soul | 50/- |
| Practising Shambala Principles | 50/- |
| Astral Ventures of A Modern Rishi | 50/- |
| Channelled Knowledge from the Rishis-Vol 2 | 150/- |
| Channelled Knowledge from the Rishis-Vol 3 & 4 | each 200/- |
| Guruji Speaks Part - I & II | each 200/- |
| Guruji Speaks (Vol 3) | 150/- |
| Guruji Speaks (Vol 4) | 250/- |
| Guruji Speaks (Vol 5 & 7) | each 200/- |
| The Book of Reflections - Vol 1 & 2 | each 200/- |
| The Book of Reflections - Vol 3 | 150/- |
| Meditators on Meditations | 75/- |
| Meditators on Experiences | 75/- |
| Meditational Experiences - Vol 1 & 2 | each 150/- |
| Awareness | 60/- |
| Living in Light | 10/- |
| Light | 10/- |
| Quotes from the Rishis - Vol 1 & 2 | each 100/- |
| Pyramid Revelations | 100/- |
| Thus Spoke Guruji Krishnananda - Vol 1 & 4 | each 200/- |
| Thus Spoke Guruji Krishnananda - Vol 2 & 3 | each 250/- |
| ಬೆಳಕಿಗೆ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಋಷಿಗಳಿಂದ ಬಂದ ಜ್ಞಾನ – ಭಾಗ 2 | 150/- |
| ಗುರು–ಶಿಷ್ಯರ ಸಂಭಾಷಣೆ | 60/- |
| ಐ–ಗುರೂಜಿ ಭಾಗ 1 | 150/- |
| ಐ–ಗುರೂಜಿ ಭಾಗ 2 | 120/- |
| ಹೊಸ ಯುಗದ ವಾಸ್ತವಗಳು | 120/- |
| ಉನ್ನತ ಸಂಪರ್ಕಗಳು | 100/- |
| ಅನಿಸಿಕೆಗಳು | 120/- |
| ಧ್ಯಾನ ಮಾಡುವುದು ಹೇಗೆ | 50/- |
| ಧ್ಯಾನ ಯೋಗ | 50/- |
| ಆತ್ಮದ ಅವರೋಹಣ | 50/- |
| ಶಂಬಲ ನಿಯಮಗಳ ಅಭ್ಯಾಸ | 50/- |
| ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | 50/- |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ಬೆಳಕು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಆನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ಬೆಳಕಿನ ಶರೀರ ಮತ್ತು ಇತರ ವಾಸ್ತವಗಳು | 100/- |
| प्रकाशवाट (Marathi) | 150/- |
| आयगुरूजी (Marathi) | 100/- |
| ध्यान कसे करावे (Marathi) | 50/- |
| ध्यानयोग (Marathi) | 50/- |
| आत्म्याचे पृथ्वीवर अवतरण (Marathi) | 50/- |
| शंबला तत्त्वांचा अभ्यास (Marathi) | 50/- |
| एका आधुनिक ऋषीचे | |
| सूक्ष्मजगातील पराक्रम (Marathi) | 50/- |
| प्रकाशमय जीवन (Marathi) | 10/- |
| प्रकाश (Marathi) | 10/- |
| उच्चस्तरीय संवाद आणि इतर सत्ये (Marathi) | 100/- |
| गुरु-शिष्य संवाद (Marathi) | 60/- |
| ध्यान कैसे करे (Hindi) | 50/- |
| ध्यान-योग (Hindi) | 50/- |
| प्रकाश (Hindi) | 10/- |
| प्रकाशमय जीवन (Hindi) | 10/- |
| प्रकाश की ओर (Hindi) | 150/- |
| आत्मा का अवतरण (Hindi) | 50/- |
| தியானம் செய்வது எப்படி | 50/- |
| ஒளியின் வாயில்கள் | 200/- |
| தியான யோகம் | 50/- |
| ஆத்மாவின் அவரோகணம் | 50/- |
| நவீன ரிஷி ஒருவரின் சூஷ்ம சாகசங்கள் | 50/- |
| சம்பலா நியமங்களின் அப்பியாசங்கள் | 50/- |
| ధ్యానం చేయ్యడం ఎలా | 50/- |
| కాంతికి ద్వారములు | 100/- |

Published: 21st of Every Month. RNI. No. KARKAN/2003/13739 Regd. Postal Regn. No. KRNA/BGE/1124/ 2020-2022
Date of posting Newsletter-25th or 27th or 29th of Every Month. Posted at Bangalore PSO, Bg-560026 No. of Pages-8



ಗುರೂಜಿ ಕೃಷ್ಣಾನಂದ (1939 - 2012)

### ಮಾನಸ ಫೌಂಡೇಶನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

### ತಪೋನಗರ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

### ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

### ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ ಮಾನಸದಲ್ಲಿ ಋಷಿಗಳ ಮಾರ್ಗದರ್ಶನದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

### ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

### ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

### ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('Manasa Foundation' ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು. 80-G ನಿಯಮದಡಿ ಆದಾಯ ತೆರಿಗೆಯ ರಿಯಾಯಿತಿ ಇದೆ.)

## ಸಾಧಕರ ಆಧ್ಯಾತ್ಮಿಕ ಅನುಭವಗಳು ಮತ್ತು ಅವರ ಪತ್ರಗಳಿಂದ ಆಯ್ದ ಭಾಗಗಳು

ಸಂ. ಶೋಭಾ ಕೆ. ರಾವ್; ಅನು: ಸ್ವರ್ಣಲತಾ

ಏಪ್ರಿಲ್ 3 ರಂದು ಸಂಜೆ ನಾನು ದೂರದರ್ಶನವನ್ನು ವೀಕ್ಷಿಸುತ್ತಿದ್ದಾಗ, ಇದ್ದಕ್ಕಿದ್ದಂತೆ ರಿಮೋಟ್ ಕೆಲಸ ಮಾಡುವುದನ್ನು ನಿಲ್ಲಿಸಿತು. ಅದರಲ್ಲಿನ ಸೆಲ್ ಅನ್ನು ಬದಲಾಯಿಸಿದರೂ ಅದು ಕೆಲಸ ಮಾಡಲಿಲ್ಲ, ಹೊಸ ರಿಮೋಟ್‌ಅನ್ನು ಕೊಂಡುಕೊಳ್ಳಬೇಕಾಗಬಹುದೆಂದು ಯೋಚಿಸಿದೆ. ಆದರೆ ಈ ಲಾಕ್‌ಡೌನ್ ತೆರವುಗೊಳ್ಳುವವರೆಗೂ ಅದು ಸಾಧ್ಯವಿಲ್ಲವಾದ್ದರಿಂದ, ಅಲ್ಲಿಯವರೆಗೂ ದೂರದರ್ಶನವನ್ನು ನೋಡದೇ ಕಾಲ ಕಳೆಯಬೇಕಾಗುತ್ತದೆ ಎಂದು ಯೋಚಿಸಿದೆ. ನಂತರ ರಿಮೋಟ್‌ಗೆ ಬೆಳಕನ್ನು ಕಳುಹಿಸಿ, "ಈ ಲಾಕ್‌ಡೌನ್ ಮುಗಿಯುವವರೆಗೆ ಕೆಲಸ ಮಾಡು," ಎಂದು ಪ್ರಾರ್ಥಿಸಿದೆ. ನಂತರ ಪ್ರಯತ್ನಿಸಿದಾಗ ಅದು ಕೆಲಸ ಮಾಡಲು ಪ್ರಾರಂಭಿಸಿತು! ಇಂತಹ ಸಮಯಗಳಲ್ಲಿ ಸಂಪರ್ಕ ಗ್ಯಾಡ್ಜೆಟ್‌ಗಳ ಕಾರ್ಯ ನಿರ್ವಹಣೆ ಎಷ್ಟು ಮುಖ್ಯ ಎಂಬುದು ನನಗೆ ಅರ್ಥವಾಯಿತು. ಬೆಳಕಿನ ಈ ಅನುಗ್ರಹಕ್ಕೆ ನನ್ನ ವಂದನೆಗಳನ್ನು ಅರ್ಪಿಸಿದೆ.

–ವೈಶಾಲಿ ಜೋಶಿ

ನಾನು ಸಾಮಾನ್ಯವಾಗಿ ನಕಾರಾತ್ಮಕ ಅನುಭವಗಳಿಗೆ ಬಹಳ ಬೇಗ ಪ್ರತಿಕ್ರಿಯಿಸುತ್ತೇನೆ. ಜನರಲ್ಲಿರುವ ಒಳ್ಳೆಯ ಗುಣಗಳನ್ನು ನೆನಪಿಸಿಕೊಂಡು ಅವರೆಲ್ಲರಿಗೂ ಹೆಚ್ಚಿನ ಪ್ರೀತಿಯನ್ನು ಕಳುಹಿಸಲು ಪ್ರಯತ್ನಿಸುತ್ತಿದ್ದೇನೆ. ಎಲ್ಲವನ್ನೂ ಸಹಿಸಿಕೊಂಡು ಅವರೊಂದಿಗೆ ಪ್ರೀತಿಯಿಂದಿರಲು ಪ್ರಯತ್ನಿಸುತ್ತಿದ್ದೇನೆ.

–ಪೂರ್ವ ಫಡ್ಕೆ

ಅಕ್ಷರಗಳನ್ನು ಗುರುತಿಸಿ, ಪದಗಳನ್ನು ಜೋಡಿಸಿ ಓದಲು ಕಷ್ಟ ಪಡುತ್ತಿದ್ದ ಏಳನೆ ತರಗತಿಯ ಒಬ್ಬ ವಿದ್ಯಾರ್ಥಿ ನನ್ನ ಬಳಿ ಮನೆಪಾಠಕ್ಕಾಗಿ ಬರುತ್ತಾನೆ. ಅವನು ಯಾವಾಗಲೂ ಕಾಗುಣಿತದಲ್ಲಿ ತಪ್ಪು ಮಾಡುತ್ತಿದ್ದ. ಆದ್ದರಿಂದ ಪ್ರತಿ ದಿನ ಪಾಠದ ಮೊದಲು ಹಾಗೂ ನಂತರ ಅವನಿಂದ ಲೈಟ್ ಚಾನಲ್ ಮಾಡಿಸಿದೆ. ಈಗ ಅವನಿಗೆ ಸರಾಗವಾಗಿ ಓದಲು ಹಾಗೂ ಬರೆಯಲು ಸಾಧ್ಯವಾಗಿದೆ. ಓದಿನಲ್ಲಿ ಏಕಾಗ್ರತೆಯೂ ಮೂಡಿದೆ. ಅವನ ಕೈ ಬರಹ ಸಹ ಸುಧಾರಿಸಿದೆ. ಈ ಎಲ್ಲದಕ್ಕೂ ಋಷಿಗಳು ಹಾಗೂ ಗುರೂಜಿಯವರಿಗೆ ವಂದಿಸುತ್ತೇನೆ. ನಮ್ಮನ್ನು ಸತತವಾಗಿ ಮಾರ್ಗದರ್ಶಿಸುತ್ತಿರುವ ಜಯಂತ್ ಸರ್‌ರವರಿಗೂ ನನ್ನ ವಂದನೆಗಳು.

–ಆರ್. ಸುಜಾತ

ಈ ಲಾಕ್‌ಡೌನ್ ಪರಿಸ್ಥಿತಿಯಲ್ಲಿ ಹೊರಗಿನಿಂದ ಪರಿಹರಿಸಿಕೊಳ್ಳಲಾಗದಂತಹ ಹೊಸ ಹೊಸ ಸವಾಲುಗಳು ಎದುರಾಗುತ್ತಿವೆ. ಋಷಿಗಳು, ಅಮರಾಜಿ ಹಾಗೂ ಗುರೂಜಿಯವರ ಅನುಗ್ರಹದಿಂದ, ಮೊದಲು ಯಾವುದನ್ನು ಪರಿಹರಿಸಲು ಸಾಧ್ಯವೇ ಇಲ್ಲ ಎಂದು ಕೊಂಡದ್ದು ಈಗ ದಿನ ನಿತ್ಯದ ತೊಂದರೆಗಳ ನಡುವೆಯೂ ಪರಿಹಾರವಾಗುತ್ತಿದೆ. ಅಂತರಂಗದಲ್ಲಿ ಶಾಂತಿ ಹೆಚ್ಚಾಗುತ್ತಿದೆ.

ನನ್ನಲ್ಲಾಗಿರುವ ಬದಲಾವಣೆಯೆಂದರೆ, ಇಂತಹ ಕಠಿಣ ಪ್ರಸಂಗಗಳಲ್ಲೂ ಪ್ರಸನ್ನವಾಗಿರುತ್ತೇನೆ. ಈ ಎಲ್ಲಾ ಸಂದರ್ಭಗಳೂ ಸರಿ ಹೋಗುತ್ತವೆ ಎಂಬ ಭರವಸೆ ನನ್ನಲ್ಲಿ ಮೂಡುತ್ತಿದೆ.

–ನಂದಿತ ಪಟೇಲ್

ಒಂದು ದಿನ ಧ್ಯಾನದಲ್ಲಿ, ಶಿವನ ಚೈತನ್ಯವು ನನ್ನನ್ನು ಸುತ್ತುವರಿದು, ಅವರೇ ನನ್ನ ಮುಂದೆ ಕುಳಿತುಕೊಂಡು ನನಗೆ ಚೈತನ್ಯ ಹಾಗೂ ಅನುಗ್ರಹವನ್ನು ಕಳುಹಿಸುತ್ತಿರುವಂತೆನಿಸಿತು. ನಂತರ ದೇವರುಗಳು ಮತ್ತು ದೇವತೆಗಳೆಲ್ಲ ಸೇರಿ ಒಟ್ಟಾಗಿ ತಮ್ಮ ಚೈತನ್ಯಗಳನ್ನು ನನಗೆ ಕಳುಹಿಸಲು ಶುರು ಮಾಡಿದರು. ಈ ಅನುಭವ ಕೆಲವು ನಿಮಿಷಗಳವರೆಗೆ ಮುಂದುವರೆಯಿತು. ಮಹರ್ಷಿ ವಿಶ್ವಾಮಿತ್ರರ ಚೈತನ್ಯ ನನ್ನನ್ನು ಆವರಿಸಿದಂತೆ, ಇವೆಲ್ಲವೂ ತಮ್ಮ ಪರಾಕಾಷ್ಠೆಯನ್ನು ತಲುಪಿದವು. ನಾನು ಪರಿಶುದ್ಧಗೊಂಡು ಹೊಸ ಜನ್ಮ ಪಡೆದ ಅನುಭವವಾಯಿತು.

–ಜಸ್‌ಪ್ರೀತ್ ಭಾಟಿಯಾ

ಒಂದು ದಿನ, ಹಗಲಿನ ಸಮಯದಲ್ಲಿ ಬೆಳಕನ್ನು ಚಾನಲ್ ಮಾಡುತ್ತಿದ್ದಾಗ ಎಲ್ಲೆಲ್ಲೂ ಬೆಳಕು ಹರಡಿರುವ ದೃಶ್ಯ ಕಾಣಿಸಿತು. ಕೆಲವರು ಆ ಬೆಳಕನ್ನು ಸಂತೋಷದಿಂದ ಅಪ್ಪಿಕೊಂಡರೆ ಇನ್ನು ಕೆಲವರು ಅದರಿಂದ ದೂರ ಓಡುತ್ತಿದ್ದರು.

–ವಿ. ಸುಬ್ಬಯ್ಯ

ನಮ್ಮ ಈ ಧ್ಯಾನಮಾರ್ಗದಿಂದ ಪಡೆದುಕೊಂಡ ಜ್ಞಾನ ಹಾಗೂ ತಿಳಿವಳಿಕೆಯು, ಈ ಲಾಕ್‌ಡೌನ್ ಪರಿಸ್ಥಿತಿಯಲ್ಲಿ ಶಾಂತವಾಗಿ ಮತ್ತು ಭರವಸೆಯಿಂದ ಇರಲು ಒಂದು ಬಲವಾದ ಅಡಿಪಾಯದಂತೆ ಕೆಲಸಮಾಡುತ್ತಿದೆ. ಈಗ ನಾನು ಹೆಚ್ಚು ಸಕಾರಾತ್ಮಕವಾಗಿದ್ದು ನನ್ನ ಜೀವನದಲ್ಲಿ ಬಂದಿರುವ ಎಲ್ಲದ್ದಕ್ಕೂ ಕೃತಜ್ಞತೆಯಿಂದಿರಲು ಸಾಧ್ಯವಾಗಿದೆ. ನಾನು ಈ ಸಮಯವನ್ನು, ಸಕಾರಾತ್ಮಕ ಬದಲಾವಣೆಗೆ ಹಾಗೂ ದೃಶ್ಯೀಕರಣ ಕಲೆ ಮತ್ತು ಗುರಿ ಸ್ಥಾಪನೆಯಂತಹ ಹೊಸ ಕೌಶಲ್ಯಗಳನ್ನು ಹೊಂದಲು ಬಳಸಿಕೊಳ್ಳುತ್ತಿದ್ದೇನೆ. ಗುರೂಜಿ ಹಾಗು ಎಲ್ಲಾ ಮಾಸ್ಟರ್‌ಗಳೂ ನನ್ನ ಹಾಗೂ ನನ್ನ ಕುಟುಂಬದವರ ಮೇಲೆ ಹರಿಸುತ್ತಿರುವ ಅನುಗ್ರಹದ ಅನುಭವ ನನಗಾಗಿದೆ. ಅವರೆಲ್ಲರಿಗೂ ನಾನು ಚಿರಋಣಿ.

ನನ್ನೆಲ್ಲ ಕಷ್ಟದ ಸಮಯಗಳಲ್ಲಿ ಸಹಕಾರ ಹಾಗೂ ಮಾರ್ಗದರ್ಶನವನ್ನು ನೀಡುತ್ತಿರುವ ಜಯಂತ್ ಸರ್‌ರವರಿಗೆ ನನ್ನ ಅನೇಕ ವಂದನೆಗಳು. ಅವರ ಈ ಕೃಪೆಗೆ ನಾನು ಸದಾ ಪಾತ್ರನಾಗಿರಲು ಪ್ರಯತ್ನಿಸುತ್ತೇನೆ.

–ಸೌರಭ್ ಜೋಶಿ

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.300/–
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077. ಮಾನಸ ಫೌಂಡೇಶನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 560 077
ಪ್ರಕಾಶನ ಸ್ಥಳ ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 560 077
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ ಎ, ವೆಸ್ಟ್ ಆಫ್ ಕಾರ್ಡ್ ರೋಡ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು–560086. ಫೋನ್: 23359992
ಸಂಪಾದಕರು : ಶ್ಯಾಮಲಾ ದೇವಿ